(MR. SPEAKER)

How his wish is to be translated, although it means he is not entitled to make a speech ?

"...When called upon, move the resolution and shall commence his speech..."

Every component is there. If he moves it then he can make his speech.

"... shall commence his speech by a formal motion in the terms appearing in the list of business."

He reads the resolution 'I beg to move...' I repeat it. Then I call upon him to make a speech. That comes in the last part of rule 139. If the Hon'ble Members go on in an excited manner confusing the discussion the whole thing goes wrong. I belive that it is perfectly clear now that the rule relied upon by Sri Krishna is absolutely not applicable. Dose Sri Krishna want to say anythis against it ?

Sri S. M. KRISHNA.—I still have a doubt lurking in my mind.

Mr. SPEAKER.—The Hon'ble Members can kindly tell me in my Chamber if he wants to say anthing. Before I pronounce the ruling, I shall give a chance to the House. The matter is made complicated.

Then comes the question of expunging. What are the rules governing expunging ? Is it objectionable ? I will make a study and give a considered ruling later on.

We shall take up the next Resolution of Sri J. P. Sarwesh.

Non-offical Resolution *re*: Implemention of the Decision of the Supreme Court regarding reservation in Government Services in respect of Backward Classes and Scheduled Castes.

Sri J. P. SARWESH (Serum).—Sir, I move :

"That this Assembly is of opinion that Government should take immediate steps to implement the decision of the Supreme Court, that the principle of reservation in Government services in respect of Backward Classes and Scheduled Castes should be followed both at the time of initial appointment and while making promotions to Selection posts, with a view to give adequate representation to Backward Classes and Scheduled Castes in Government services."

Mr. SPEAKER.—Resolution Moved :

"That this Assembly is of opinion that Government should take immediate steps to implement the decision of the Supreme Court, that the principle of reservation in Government services in respect of Backward Classes and Scheduled Castes should be followed both at the time of initial appointment and while making

promotions to Selection posts, with a view to give adequate representation to Backward Classes and Scheduled Castes in Government services."

In connection with this Resolution, the following six books are placed on the Table for the use of the members, (1) Mysore Backward Classes Committee Report, (2) 'Harijan on the March', (3) On the Welfare of Backward Class, (4) Bombay Scheduled Castes and Tribes Appointments Committee Report, (5) Welfare of Scheduled Castes in Mysore, (6) Report of the Commissioner for Scheduled Castes 1960-61 Central Parts I and II. And the Judgment of the Supreme Court also is placed on the Table. The members may have all the information necessary for ready refernce. Sri Sarwesh may now speak.

† Sri J. P. SARWESH.—In support of my resolution, I wish to say a few words about the Scheduled Castes.

[Smt. BASAVARAJESWARI (CHAIRMAN) in the Chair]

The Scheduled Castes are subjected to all kinds of exploitation. The caste system which is the worst weapon of exploitation had played a very great part in subjecting these classes to all kinds of exploitation for ages together. Lord Buddha first tried to purify this community and he preached brotherhood and equality and tried to see that they were lifted from the state of subjection. He was the first champion who preached against the caste system, but he failed and Basavanna also failed to purify the community because the Lingayats who follow Basavanna, themselves have become a section in our socitey. Like that, Guru Nanak and several other religious teachers tried to bring unity in our nation but all failed. The great leaders of our country provided constitutional protections and certain rights to the Scheduled Castes, which were not at all available in the past. Prior to that, the Scheduled Castes were never given any kind of justice. They were denied even the civil rights. Only after Independence, the national leaders gave fundamental rights to them and reserved seats for them in the services as well as in the Parliament and State Assemblies. The object of the framers of the Constitution was to see that this section of people who suffered so much were given certain privileges and certain rights, and some percentage of reservation in the services also. But unfortunately, only in Class IV services we find the Scheduled Castes in a greater number, in Class III in a lesser number and as we go up, their number is negligible. I have full confidence in the Chief Minister and in the Government that they will bestow their special attention to see that the Scheduled Castes get due representation in the highest gazetted posts—Class I and Class II. The object of the Constitution makers was to see that these people were really uplifted, but that object was not carried out in the way in which it ought to be done, with a bad intention just to provide other classes with posts and after the expiry of the ten years period, the whole attempt at the upliftment of the Scheduled Castes would have come to an end. Their object was to bring unity in the nation and that could be achieved

(SRI J. P. SARWESH)

actually when representation is given to the poorest and most exploited section in the higher posts. Sir, I will point out certain cases. In the department of Industries, there are certain officers who have put in maximum years of service and even in the seniority list they happen to be at the top. But the Director is not at all prepared to give them promotion on the grounds that they are inefficient. One leather Inspector came from Bombay and joined our State services and he has put in the maximum service and he is an expert in that line. He can say to what animal a particular leather belongs by simply feeling it. But, promotion is denied to him although he satisfies all the considerations. Even though there was a direction from the Government, his right was denied and he is not given his legitimate promotion. There is another Supervisor in the same department who is a B.Sc. (Textile) and in the seniority list also his name is in the top. He is also denied promotion. In the Technical Education Department there is a highly qualified person and he is a B.Sc., B.S., in Technology. There are some Reserved posts of first grade but they are not filled up but this person is not promoted to that post. Sir, whenever representations are made, the authorities say that there are no qualified persons. But, when there are qualified persons in the department itself they are not given their legitimate promotions. They say that according to the seniority list it will be done and that the seniority list is under preparation. Such things are going on. Sir, Government is not barred from giving reservation in the matter of promotion. If Government wishes, it may do it. These people are treated worse than the slaves. Cannot you have this much of sympathy towards these down-trodden people ? These people were subject to all kinds of humiliation in the past. To uplift them is the responsibility of the nation. If this is not done, then the aims and objectives of our national leaders would be of no avail at all. Their object will be defeated. With these words I commend the resolution for the acceptance of the House.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದಿರತಕ್ಕ ಈ ನಿರ್ಣಯವನ್ನು ನಾನು ಅನುಮೋದಿಸುತ್ತ ಕೆಲವು ವಿಚಾರಗಳನ್ನು ಈ ಸಭೆಯ ಅವಗಾಹನೆಗೆ ತರಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಸುಪ್ರೀಂ ಕೊರ್ಟು ಕೆಲವು ದಿನಗಳ ಹಿಂದೆ ಒಂದು ನಿರ್ಣಯವನ್ನು ಕೊಟ್ಟಿತ್ತು. ಆ ನಿರ್ಣಯದ ಪ್ರಕಾರ ಸೆಲೆಕ್ಷನ್ನು ಹುದ್ದೆಗಳಿಗೆ ಭರ್ತಿ ಮಾಡುವ ಕಾಲದಲ್ಲಿ ಅವರು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ಆ ನೀತಿಗಳನ್ನು ಅನುಸರಿಸಬೇಕು ಎಂದು ಒಂದು ನಿರ್ದೇಶನವನ್ನು ಕೇಂದ್ರ ಸರಕಾರದವರು ಎಲ್ಲಾ ರಾಜ್ಯ ಸರಕಾರಗಳಿಗೂ ಕಳುಹಿಸಿ ಕೊಟ್ಟಿದ್ದಾರೆ. ಯಾವ ಕಾರಣಕ್ಕೋಸ್ಕರ ಸುಪ್ರೀಂ ಕೋರ್ಟು ಇಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿತು ಎಂದು ವಿವರಿಸುತ್ತಾ ಈಗ ಹೆಚ್ಚು ಕಾಲವಿಳಂಬ ಮಾಡುವುದಿಲ್ಲ. ಅದು ಎಲ್ಲರಿಗೂ ಈಗಾಗಲೇ ತಿಳಿದಿದೆ. ಈಗ ಇಲ್ಲಿ ತಂದಿರುವ ರೆಸಲ್ಯೂಷನ್ನಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ದೇಶದ ಇಡೀ ಜನಾಂಗದಲ್ಲಿ ಸುಮಾರು ಐದನೇ ಒಂದು ಪಾಲು ಜನಾಂಗದ ಪ್ರಶ್ನೆ ಇದು. ನಮ್ಮ ರಾಜ್ಯಾಂಗದಲ್ಲಿಯೂ ಹಿಂದುಳಿದ ಜನಾಂಗಗಳಿಗಾಗಿ ಪರಿಶಿಷ್ಟ ಜನಗಳಿಗಾಗಿ ಕೆಲವಾರು ಸವಲತ್ತುಗಳನ್ನು ಅಳವಡಿಸಿದ್ದಾರೆ. ರಾಜ್ಯಾಂಗದ ಆರ್ಟಿಕಲ್ 335 ಮತ್ತು ಆರ್ಟಿಕಲ್ 16 (4) ರ ಪ್ರಕಾರ ಕೇಂದ್ರ ಸರಕಾರದವರು ಕೆಲವಾರು ಸವಲತ್ತುಗಳನ್ನು ಕೊಡಬೇಕೆಂದು ಇದೆ. ಅದನ್ನು ಇಲ್ಲಿ ಸ್ವಲ್ಪ ಓದುತ್ತೇನೆ. ಅದು ಈ ರೀತಿ ಇದೆ :

16 (4) " Nothing in this article shall prevent the State from making any provision for the reservation of appointments or

posts in favour of any backward class of citizens which, in the opinion of the State, is not adequately represented in the services under the State."

Article 335.— "The claims of the members of the Scheduled Castes and the Scheduled Tribes shall be taken into consideration, consistently with the maintenance of efficiency of administration, in the making of appointments to services and posts in connection with the affairs of the Union or of a State."

ನಮ್ಮ ರಾಜ್ಯಾಂಗದತ್ತವಾದ ಈ ಒಂದು ನವಲತ್ತುಗಳನ್ನು ಜಾರಿಗೆ ಕೊಡುವ ಸಮಯದಲ್ಲಿ ಕೇಂದ್ರ ಸರಕಾರದವರು Reservation Order ಹೊರಡಿಸಿ Instructions ಕೊಟ್ಟಿದ್ದಾರೆ. ಅದರ ಪ್ರಕಾರ ಕೇಂದ್ರ ಸರಕಾರ ಮತ್ತು ಪ್ರಾಂತೀಯ ಸರಕಾರಗಳಲ್ಲಿ ಶೇಕಡಾ ಹನ್ನೆರಡೂವರೆಯಷ್ಟು ಹುದ್ದೆಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಬಹುದು ಆದರೇ ಮೂರರಷ್ಟು ಹುದ್ದೆಗಳನ್ನು ಹಿಂದುಳಿದ ವರ್ಗಗಳಿಗಾಗಿ ಇಡುವಂತೆ ವಿಧಿಸುವ ಆರ್ಡರನ್ನು ಇಲ್ಲಿ ಅನ್ವಯಿಸಬೇಕು ಎಂದಿದೆ. ನಮ್ಮ ರಾಜ್ಯದಲ್ಲಿಯೂ ಇದನ್ನು ಜಾರಿಗೆ ಕೊಡಲು ಅನುಕೂಲವಾಗುವಂತೆ ಶ್ರೀಯುತ ವೀರಪ್ಪ ನವರ ಅಧ್ಯಕ್ಷತೆಯಲ್ಲಿ ಸರಕಾರದವರು ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಆ ಕಮಿಟಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ, ಷೆಡ್ಯೂಲ್ಡ್ ಕ್ಲಾಸುಗಳ ರೆಪ್ರೆಜೆಂಟೇಷನ್ ಕ್ಲಾಸ್ I ರಲ್ಲಿ 1.89 ಇವೆ. ಹಾಗೇ ಷೆಡ್ಯೂಲ್ಡ್ ಟ್ರೈಬು ಪಂಗಡಕ್ಕೆ ಕ್ಲಾಸ್ I ರಲ್ಲಿ .29 ಎಂದು ಇದೆ. ಎರಡನೇ ವರ್ಗದ ಪೊಸ್ಟುಗಳಲ್ಲಿ 3.36 ಇದೆ. ಮೂರನೆ ವರ್ಗದ ಹುದ್ದೆಗಳಲ್ಲಿ 6.38 ಎಂದಿದೆ. ಹಾಗೇ ನಾಲ್ಕನೇ ವರ್ಗದ ಹುದ್ದೆಗಳಲ್ಲಿ 11.96 ಎಂದಿದೆ. ಹಾಗೇ ಷಡ್ಯೂಲು ಟ್ರೈಬ್ಸ್‌ಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡೋಣ. ಎರಡನೇ ವರ್ಗದ ಹುದ್ದೆಗಳಲ್ಲಿ .24 ಇದೆ ಮೂರನೆಯ ವರ್ಗದ ಹುದ್ದೆಗಳಲ್ಲಿ .43 ಎಂದಿದೆ. ಹಾಗೇ ನಾಲ್ಕನೇ ವರ್ಗದ ಹುದ್ದೆಗಳಲ್ಲಿ 1.10 ಎಂದಿದೆ. ಐದನೇ ಒಂದು ಭಾಗ ಪ್ರಜಾ ಸಂಖ್ಯೆಯ ಈ ಜನಾಂಗದವರಿಗೆ ಎಷ್ಟೇ ನವಲತ್ತುಗಳನ್ನು ಕೊಟ್ಟಿದ್ದರೂ ಮತ್ತು ಇದಕ್ಕಾಗಿ ಸರಕಾರದವರನ್ನು ಹೆಚ್ಚಾಗಿ ಕೇಳಿಕೊಂಡಿದ್ದರೂ ಮೊದಲನೇ ವರ್ಗದ ಹುದ್ದೆಗಳಲ್ಲಿ ನೇಮಕ ಮಾಡಿರುವುದು ಕೇವಲ 1.89 ಎನ್ನುವುದು ಇದರಿಂದ ಗೊತ್ತಾಗುತ್ತದೆ

Representation of the Committees in Government Services :—

Class I Posts—97.7
Class II Posts—96.40
Class III Posts—93.19
Class IV Posts—86.94

ಇದನ್ನು ನೋಡಿದರೆ ಏನು ಗೊತ್ತಾಗುತ್ತದೆಂದರೆ, ಅನೇಕ ನಲವತ್ತುಗಳನ್ನು ಆರ್ಡರ್ ಮಾಡಿದ್ದೀರ ಆದರೆ ಅವುಗಳನ್ನು ಯಾವ ಒಂದು ದೊಡ್ಡ ಮನಸ್ಸಿನಿಂದ, ಉದಾರ ಮನಸ್ಸಿನಿಂದ ಸರ್ಕಾರದವರು ಮಾಡಿದ್ದಾರೆಯೋ, ಅವುಗಳನ್ನು ಆದೇ ಉದಾರನೀತಿಯಿಂದ ಕಾರ್ಯಗತಮಾಡಲಿಲ್ಲ. ಇದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಅಲ್ಲದೆ ಅನೇಕ ಕಾರಣಗಳಿಂದಾಗಿ ಕೇಂದ್ರ ಸರಕಾರದ ರೈಲ್ವೆ ಇಲಾಖೆಯು ಒಂದು ಕೇಡರ್ ಸ್ಥಾನವನ್ನು ಭರ್ತಿಮಾಡಿದ ನಲುವಾಗಿ ಒಂದು ಆಫೀಲು ಉದ್ಭವವಾಗಿ ತನ್ಮೂಲಕ ಸುಪ್ರೀಂ ಕೋರ್ಟು ಜಜ್‌ಮೆಂಟು ಬಂದು ಅದರಲ್ಲಿ ಅಡಕವಾಗಿರುವ ತತ್ವ ಇವತ್ತು ಈ ನಿರ್ಣಯದ ರೂಪದಲ್ಲಿ ಸಭೆಯ ಮುಂದೆ ಬಂದಿದೆ. ಅದರ ನಲುವಾಗಿಯೇ ಇಷ್ಟು ಚರ್ಚೆಯಾಗುತ್ತಿದೆ. ಇದು ಪುನಃ ಏನು ತೋರಿಸುತ್ತದೆ? ಅನೇಕ ನವಲತ್ತುಗಳನ್ನು ಅನುಸೂಚಿತ ಜಾತಿಗಳಿಗಾಗಿ ಮಾಡಿದರೂ, ಅವುಗಳು ಜಾರಿಯಾಗಿಲ್ಲವೆಂದು ಸ್ಪಷ್ಟವಾಗುತ್ತದೆ. ಈ ಒಂದು ತರಾವನ್ನು ತಂದಿರುವ ಉದ್ದೇಶವಾದರೂ ಇಷ್ಟೇ. ಸರಕಾರದವರು ಇಲ್ಲಿಯವರೆಗೆ ಹಿಂದುಳಿದ ಕೋವಿ ನವರ ಮತ್ತು ಪರಿಶಿಷ್ಟ ವರ್ಗದವರ ಹಿತಸಾಧನೆಗಾಗಿ ಏನೇನು ಆಜ್ಞೆಗಳನ್ನು ಮಾಡಿದ್ದಾರೆಯೋ ಅವುಗಳನ್ನು ತೀವ್ರವಾಗಿ ಜಾರಿಗೆ ಕೊಡಬೇಕು, ಈ ತೀವ್ರ ಮನೋಭಿಪ್ರಾಯವನ್ನು ಈ ಸಭೆಯು ಮಾನ್ಯ ಸದಸ್ಯರಿಗೆ ಮುಟ್ಟಿಸುವುದೇ ಇದರ ಉದ್ದೇಶವಾಗಿರುತ್ತದೆ. ಈ ನಿರ್ಣಯದಲ್ಲಿ ಯಾವ ವಿಧವಾದ ಒಬ್ಬ ಆಫೀಸರನ್ನಾಗಲೀ, ಯಾವ ಇಲಾಖೆಯನ್ನಾಗಲೀ ಮನಸ್ಸಿನಲ್ಲಿಟ್ಟುಕೊಂಡಿಲ್ಲ. ಆ ಪ್ರಶ್ನೆಯೇ ಇಲ್ಲ. ಐದನೇ ಒಂದು ಭಾಗವಾಗಿರುವ ಅನುಸೂಚಿತ ಜನಾಂಗದ ಹಿತರಕ್ಷಣೆಯೇ ಮುಖ್ಯ ಉದ್ದೇಶ. ನಾನು ಪದೇ ಪದೇ ಹೇಳುತ್ತಿರುವಂತೆ ಈ ವರ್ಗಗಳ ಹಿತದೃಷ್ಟಿಯಿಂದ

(ಶ್ರೀ ಜಿ. ದುಗ್ಗಪ್ಪ)

ಅನೇಕ ಆಜ್ಞೆಗಳನ್ನು ಮಾಡಿದ್ದರೂ, ಅವುಗಳನ್ನು ಜಾರಿಗೆ ಕೊಡುವುದರಿಂದ, ಈ ಜನಗಳಲ್ಲಿ ಒಂದು ಕಳವಳಕಾರಿಯಾದ ಮನೋಭಿಪ್ರಾಯ ಹುಟ್ಟಿದೆ, ಈ ಒಂದು ಕಳವಳಕಾರಿಯಾದ ಮನೋಭಿಪ್ರಾಯವೇನಿದೆ ಅದನ್ನು ಅರಿತುಕೊಂಡು, ಅದು ಇನ್ನೂ ಹೆಚ್ಚಿಗೆ ಬೆಳೆದುಕೊಂಡು ಹೋಗದಂತೆ ಮಾಡಬೇಕಾದರೆ, ಇಲ್ಲಿಯವರೆಗೆ ಮಾಡಿರುವ ಆಜ್ಞೆಗಳನ್ನು ಜಾರಿಗೆ ಕೊಟ್ಟು ತನ್ಮೂಲಕ ಅವರನ್ನು ಸಮಾಧಾನ ಮಾಡುವುದೊಂದೇ ಮಾರ್ಗ. ಇದು ಸಮಾಧಾನ ಮಾಡುವುದೆಂದು ಭಾವಿಸಬಾರದು. ಈ ಕಳವಳಕ್ಕೆ ಅವಕಾಶ ಕೊಡದಂತೆ ವರ್ತಿಸುವುದು ಸರ್ಕಾರದ ಕರ್ತವ್ಯ. ತಾವೇ ಮಾಡಿದ ಆಜ್ಞೆಗಳನ್ನು ಚಲಾಯಿಸುವುದು ಸರ್ಕಾರದವರ ಆದ್ಯ ಕರ್ತವ್ಯ. ಆ ಕರ್ತವ್ಯವನ್ನು ಪಾಲಿಸಬೇಕೆಂದು ಸರಕಾರದಲ್ಲಿ ಬಹಳ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ನಾವು ಅನೇಕ ಸಂದರ್ಭಗಳಲ್ಲಿ ಅನೇಕ ಸಮಯಗಳಲ್ಲಿ ಅನುಸೂಚಿತ ಜಾತಿಗಳಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡುವುದನ್ನು ಸರಕಾರದ ಗಮನಕ್ಕೆ ತಂದೇತರುತ್ತೇವೆ. ಆದರೆ ಸರ್ಕಾರದ ನೀತಿ ಏನಾಗಿದೆಯೆಂದರೆ ಅನೇಕ ಸಂದರ್ಭಗಳಲ್ಲಿ ಅಳುವ ಮಗುವಿಗೆ ಆಟದ ಸಾಮಾನುಗಳನ್ನು ಕೊಟ್ಟು ಆ ಸಮಯಕ್ಕೆ ಸಮಾಧಾನ ಮಾಡಿದ ಹಾಗೆ, ಕ್ಷಣಿಕವಾಗಿ ತೃಪ್ತಿಪಡಿಸಿದರೆ, ಆಮೇಲೆ ಮಗುವಿಗೆ ಮರೆತುಹೋದ ಹಾಗೆ ಮರೆತುಹೋಗುತ್ತದೆಂದು ನಮಗಾದರೂ ಈ ಧೋರಣೆಯಿಂದ ಏನೆನ್ನಿಸುತ್ತದೆಯೆಂದರೆ ಇವರು ಕನ್ನಡಿಯಲ್ಲಿರುವ ಗಂಟನ್ನು ತೋರಿಸುತ್ತಿದ್ದಾರೆ. ಕನ್ನಡಿಯಲ್ಲಿರತಕ್ಕಂಥ ಗಂಟನ್ನು ನೋಡಿದರೆ ದೊಡ್ಡ ಗಂಟು ಇರುತ್ತದೆ. ಆದರೆ ನಮಗೆ ಬಂದದ್ದು ಏನು ! ಅದೇರೀತಿ ಸರ್ಕಾರದ ಆಜ್ಞೆಗಳೂ ಇವೆ. ಈ ಜಾತಿಗಳವರ ಹಿತಸಾಧನೆ ಮಾಡಲು ಒಂದು ಕಮಿಟಿಯನ್ನು ಮಾಡಿದ್ದರು ಅವರು ಬರೆದಿರುವ ಶಿಫಾರಸುಗಳ ಒಂದು ಸೆಟ್ಟು ಕವಿದೆ; ಯಾವ ಯಾವ ಸವಲತ್ತುಗಳನ್ನು ಅವರಿಗೆ ಕೊಡಬೇಕೆಂಬ ಬಗ್ಗೆ ಸುಮಾರು 10—20 ವರ್ಷಗಳಿಂದ ಮಾಡಿರುವ ಆರ್ಡರುಗಳ ಒಂದುಕಂತೆಯೇ ಇದೆ. ಅವುಗಳನ್ನು ಜಾರಿಗೆ ಕೊಡದಿದ್ದಮೇಲೆ, ಅವು ಇಲ್ಲದಿರುವಷ್ಟೇ ಪ್ರಯೋಜನ. ಕನ್ನಡಿಯಲ್ಲಿರತಕ್ಕಂಥ ಗಂಟು ಹೇಗೆ ಪ್ರಯೋಜನಕ್ಕೆ ಬರುವುದಿಲ್ಲವೋ, ಹಾಗೆಯೇ ಈ ಆಜ್ಞೆಗಳೂ; ಎಷ್ಟು ಆರ್ಡರ್ ಮಾಡಿದ್ದಾರೆಂದು ನೋಡಿ ಅಷ್ಟಕ್ಕೇ ತೃಪ್ತಿಯಾಗಬೇಕು. ಈ ಕಣ್ಣೊರಿಸುವ ನೀತಿ ಸರ್ಕಾರಕ್ಕೆ ಸಾಧುವಲ್ಲ. ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಈ ವರ್ಗಗಳ ಹಿತರಕ್ಷಣೆ ಎಷ್ಟು ವಿಧದಲ್ಲಿ ಮಾಡಬೇಕು ಎಂಬ ಸದುದ್ದೇಶದಿಂದ ಹೊರಡಿಸಿರುವ ಆಜ್ಞೆಗಳಲ್ಲಿ, ಒಂದೂ ಸತ್ಫಲವಾಗಿಲ್ಲ.

ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅಖಿಲ ಭಾರತ ಷೆಡ್ಯೂಲ್ಡ್ ಕ್ಯಾಸ್ಟ್ ಲೀಗಿನವರೂ ಸಹ ಮೊನ್ನೆ ದೆಹಲಿಯಲ್ಲಿ ಸಭೆಸೇರಿ, ದೇಶಾದಾದ್ಯಂತದ ಒಂದು ಸಮಗ್ರ ಚಿತ್ರಪಟವನ್ನು ತೆಗೆದುಕೊಂಡು, ತಮ್ಮ ಪ್ರತಿಕ್ರಿಯೆಯನ್ನು ಸರ್ಕಾರದ ನೀತಿಯ ಬಗ್ಗೆ ವ್ಯಕ್ತ ಪಡಿಸಿದ್ದಾರೆ. ಅವರ ಪ್ರತಿಕ್ರಿಯೆ ಈ ದೇಶದಲ್ಲಿರತಕ್ಕಂಥ ಅನೇಕ ಸಂಸ್ಥಾನಗಳ ಸರಕಾರಗಳು ಮತ್ತು ಕೇಂದ್ರ ಸರಕಾರದವರೂ ಸಹ ಈ ಪರಿಶಿಷ್ಟವರ್ಗಗಳ ಹಿತರಕ್ಷಣೆಯನ್ನು ಸಾಕಷ್ಟು ಮಾಡಿಲ್ಲ ಎಂಬುದು, ಈ ಪ್ರತೀಕರಣವನ್ನು ಬಹಳ ನೊಂದ ಮನಸ್ಸಿನಿಂದ, ಅಸಮಾಧಾನದಿಂದ, ಎಚ್ಚರಿಕೆ ಕೊಡುವರೀತಿಯಿಲ್ಲಿ ಹೇಳಿದ್ದಾರೆ. ಅವರು ಕೇಂದ್ರ ಸರ್ಕಾರದಲ್ಲಿ ಮತ್ತು ಪ್ರಾಂತೀಯ ಸರ್ಕಾರಗಳಲ್ಲಿ, ಈ ತೀವ್ರವಾದ ಪ್ರಶ್ನೆಯನ್ನು ಕೊಡಲೇ ಪರಿಗಣಿಸಿ ಸಾಕಷ್ಟು ಸವಲತ್ತುಗಳನ್ನು ಅನುಸೂಚಿತವರ್ಗಗಳಿಗೆ ಕೊಡಬೇಕೆಂದು ಮನವಿಮಾಡಿಕೊಂಡಿದ್ದಾರೆ. ಅಖಿಲ ಭಾರತ ಡಿಪ್ರೆಸ್ಡ್ ಲೀಗಿನವರು ಸಹ ಈ ಜಾತಿಗಳ ಚಿಂತಾಜನಕಸ್ಥಿತಿಯ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತ ಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ; ಅದನ್ನು ಹೇಳಬೇಕೋ ಬೇಡವೋ ನನಗೆ ಗೊತ್ತಿಲ್ಲ, ಆದರೂ ಹೇಳುತ್ತೇನೆ. ಮನಸ್ಸು ಇದ್ದರೆ ಮಾರ್ಗ. ಮುಂಜೆ ದಾರಿ ನಡೆದ ಮೇಲೆ, ದಾರಿ ಬರುತ್ತದೆ. ದಾರಿ ಆದಮೇಲೆ ಅಲ್ಲ, ನಡೆದಮೇಲೆ, ಮಾರ್ಗ ಬೀಳುತ್ತದೆ. ಮನಸ್ಸು ಇದ್ದರೆ ಮಾರ್ಗವಿದೆ, ಆದರೆ ಆ ಮನಸ್ಸು ಸರ್ಕಾರಕ್ಕೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಅದಿದ್ದರೆ ಮಾರ್ಗವಿದೆ. ನಾನು ಈ ಅನುಸೂಚಿತ ಜಾತಿಗೆ ಸೇರಿದ ನೌಕರುಗಳಿಗೆ ಆದ ಒಂದು ಸಂಗತಿಯನ್ನು ಹೇಳಿ, ಸರಕಾರ ಅವರ ವಿಷಯದಲ್ಲಿ ನಡೆದು ಕೊಂಡಿರುವುದು ಸರಿಯೇ ಎಂದು ನೋಡಲು ಈ ಸಭೆಯ ತೀರ್ಮಾನಕ್ಕೇ ಬಿಡುತ್ತೇನೆ. ಸುಮಾರು ಎರಡು ಮೂರು ವರ್ಷಗಳ ಹಿಂದೆ 17 ಜನ ಹರಿಜನ ನೌಕರುಗಳನ್ನು ಡಿಸ್ಟ್ರಿಕ್ಟ್ ಸೋಶಿಯಲ್ ವೆಲ್‌ಫೇರ್ ಆಫೀಸುಗಳಿಗೆ ಸರ್ಕಾರದವರು ನೇಮಕ ಮಾಡಿಕೊಂಡರೂ ಅವರು ಎಲ್ಲಾ ಪರಿಶಿಷ್ಟವರ್ಗಕ್ಕೆ ಸೇರಿದವರು. ಅವರನ್ನು ಆ ಹುದ್ದೆಯಲ್ಲಿ ವರ್ಷವರ್ಷವೂ ಮುಂದುವರಿಸಿಕೊಂಡು ಬಂದರು. ಸರ್ಕಾರ ಯಾವಾಗಲೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಅವರು ಒಂದು ಆಜ್ಞೆಯನ್ನು ಹೊರಡಿಸಿದಮೇಲೆ ಆ ಆಜ್ಞೆಯು ಸರಿಯೆ ತಪ್ಪೆ ಎಂದು ಕೂಲಂಕುಷವಾಗಿ ವಿಮರ್ಶಿಸಿ ಹೊರಡಿಸಿರುತ್ತಾರೆ, ತಾವು ಹೊರ

ಡಿಸಿದ ಆಜ್ಞೆಯನ್ನೇ ಸಮರ್ಥನೆ ಮಾಡಿಕೊಳ್ಳಲು ಹೋದರೆ ಏನೆಂದು ಹೇಳೋಣ ? ಯಾರೋ ಇದ್ದಾಗ ಏನೋ ಜವಾಬ್ದಾರಿ ಇಲ್ಲದೆ ಮಾಡಿಬಿಟ್ಟರು ಎಂದು ಹೇಳತಕ್ಕಂಥಾದ್ದು ಯೋಗ್ಯವಲ್ಲ, ಏಕೆಂದರೆ ಸರಕಾರ ಅನ್ನುವುದು ಅವಿಚ್ಛಿನ್ನ, ಹಿಂದೆ ಮಾಡಿದ್ದರಲ್ಲಿ ತಪ್ಪಿದ್ದರೆ ಸರಿಪಡಿಸಿಕೊಳ್ಳಬೇಕು. ಈ 17 ಜನ ಆಫೀಸರುಗಳು, ಎರಡು ಮೂರು ವರ್ಷಗಳು ವೆಲ್‌ಫೇರ್ ಆಫೀಸರಾಗಿ ಕೆಲಸಮಾಡಿದನಂತರ ಸರ್ಕಾರಕ್ಕೆ ಅವರನ್ನು ಗೆಜೆಟೆಡ್ ಹುದ್ದೆಗಳಿಗೆ ಬಡ್ತಿಕೊಟ್ಟು ನೇಮಕ ಮಾಡಿದ್ದು ಸರಿಯಲ್ಲವೆಂದು ಹೇಳುವುದು ಸರಿಯಲ್ಲ. ಅವರಗಳನ್ನು ಅಪಾಯಿಂಟ್ ಮಾಡುವಾಗ, ಅವರಿಗೆ ತಕ್ಕ ಕ್ವಾಲಿಫಿಕೇಶನ್ನುಗಳಿರಲಿಲ್ಲವೇ ? ಅಥವಾ ಅವರನ್ನು ನೇಮಕ ಮಾಡಿಕೊಳ್ಳುವಾಗ ಸರಿಯಾದ ಕ್ರಮ ಅನುಸರಿಸಿರಲಿಲ್ಲವೇ ? ನೇಮಕದ ಕ್ರಮ ಸರಿಯಿಲ್ಲವೆಂದು ಎರಡುವರ್ಷಗಳ ಮೇಲೆ ಗೊತ್ತಾಯಿತು ತತ್ಪರಿಣಾಮವಾಗಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸಲಹೆ ಕೇಳಿದರು, ಅವರು ಅದನ್ನು ಸರಿಪಡಿಸುವುದಕ್ಕಾಗುವುದಿಲ್ಲವೆಂದು ಹೇಳಿದರು. ಅಕೌಂಟೆಂಟ್ ಜನರಲ್ಲರು ವಿಧಿಪ್ರಕಾರವಾಗಿ ನೇಮಕ ಕ್ರಮವಾಗಿಲ್ಲದಿದ್ದರೆ, ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರಂತೆ. ಹೀಗಾಗಿ ಈ 17 ಜನರನ್ನು ಇಟ್ಟುಕೊಳ್ಳುವ ಹಾಗೂ ಇಲ್ಲ, ಮನೆಗೆ ಕಳುಹಿಸುವ ಹಾಗೂ ಇಲ್ಲದ ಒಂದು ಅನಿವಾರ್ಯದ ಪರಿಸ್ಥಿತಿ ಬಂದಿದೆ. ಈ 17 ಜನರಲ್ಲಿ 11 ಜನ ಕ್ಲಾಸ್ III ಹುದ್ದೆಗಳಲ್ಲಿ ನೇಮಕವಾಗಿ, ಕಷ್ಟಪಟ್ಟು ಆದ ಸರ್ಕಾರಿ ನೌಕರರು.

ಅವರೆಲ್ಲಾದರೂ ಬಂದು ಕೇಳಿದ್ದರೆ ನಮ್ಮನ್ನು ಗೆಜೆಟೆಡ್ ಆಫೀಸರ್ ಮಾಡಿ ಎಂದು. ರಾಜ್ಯದ ಐದನೆಯ ಒಂದು ಭಾಗದ ಜನಗಳ ಪ್ರತಿನಿಧಿಗಳು ಬಂದು ಒತ್ತಾಯ ಮಾಡಿ ಅನೇಕ ಇಲಾಖೆಗಳಲ್ಲಿ ಪರಿಶಿಷ್ಟ ವರ್ಗಗಳಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲ, ಅದನ್ನು ಕೊಡಿ ಎಂದು ಕೇಳುತ್ತಿದ್ದರು ಅದನ್ನು ಅನುಲಕ್ಷಿಸಿ ಸರಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಆಜ್ಞೆಯನ್ನು ಹೊರಡಿಸಿದಾಗ ಒಳ್ಳೆಯ ಕೆಲಸವನ್ನು ಮಾಡಿದರು. ಹಾಗೆ ಮಾಡಿದಂಥ ಒಳ್ಳೆಯ ಕೆಲಸವನ್ನು ಸಿಂಧು ಮಾಡಲಿಲ್ಲ ಆರು ತಿಂಗಳ ಮೇಲೆ ಸರಕಾರದವರು ಈ ಹುದ್ದೆಗಳ ನೇಮಕಗಳನ್ನು ಸರಿಪಡಿಸಬೇಕಾಗಿತ್ತು. ಆದರೆ ಸರಿಪಡಿಸಲಿಲ್ಲ. ಇದು ಸರ್ಕಾರದ ಅಕ್ಷಮ್ಯ ಅಪರಾಧ. ಆ ಹೊತ್ತು ಸರ್ಕಾರ ತಾನು ಮಾಡಿದ ಒಂದು ಕೃತ್ಯಕ್ಕಾಗಿ 17 ಜನ ನಿರಪರಾಧಿ ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತಿದೆ. ಇವತ್ತು ನಾನು ಈ ಮಾನ್ಯ ಸಭೆಯಲ್ಲಿ ಹೇಳುತ್ತೇನೆ, ಸರ್ಕಾರವನ್ನು ವಿನಯ ಪೂರ್ವಕವಾಗಿ ಕೇಳುತ್ತೇನೆ: ಈ ಅಧಿಕಾರಿಗಳನ್ನು ಯಾರ ತಪ್ಪಿಗೋಸ್ಕರ ಬಲಿ ಹಾಕುತ್ತಿದ್ದೀರಿ ? ಯಾರ ತಪ್ಪಿಗೋಸ್ಕರ ಅವರನ್ನು ಮನೆಗೆ ಕಳುಸುತ್ತೀರಿ ? ಈ ಬಗ್ಗೆ ಸರ್ಕಾರದ ರೀತಿ ನೀತಿಗಳಾದರೂ ಏನು ? ಯಾವ ಆಫೀಸರು ಅಥವಾ ಯಾವ ದರ್ಜೆಯ ಆಫೀಸರು ಇದಕ್ಕೆ ಜವಾಬ್ದಾರರು ? ಯಾವ ಆಫೀಸರೇ ಆಗಲ, ಯಾರ ತಪ್ಪಿಗೋಸ್ಕರ ಈ ಪ್ರಮಾದ ನಡೆದಿದೆ ಎಂದು ನೀವು ಈಗ ಹೇಳಬೇಕಾಗಿದೆ. ನಾನು ಉದ್ರೇಕದಿಂದ ಹೇಳುತ್ತ ಇಲ್ಲ, ಬಹಳ ಸಂಕಟದಿಂದ ಹೇಳುತ್ತಿದ್ದೇನೆ. ಈ ಆಫೀಸರುಗಳು ಅನುಸೂಚಿತವರ್ಗಗಳಿಗೆ ಸೇರಿದವರಾಗಿದ್ದರೆ ಅವರು ನೇಮಕವಾದ ಆರು ತಿಂಗಳೊಳಗಾಗಿ ಅವರ ನೇಮಕಗಳನ್ನು ಸರಿಪಡಿಸಿದೆ ಎಂದು ಆಜ್ಞೆ ಹೊರಡಿಸುತ್ತಿದ್ದರು ; ನೇಮಕವಾದ ಸ್ವಲ್ಪ ದಿನಗಳಲ್ಲೇ ಎಲ್ಲ ಸರಿಮಾಡಿಕೊಳ್ಳುತ್ತಿದ್ದರು, ಎಲ್ಲ ಸರಿಯಾಗಿ ನಡೆಯುತ್ತಿತ್ತು. ಇದು 'ಬೇಕಿಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎನ್ನುವ ಹಾಗೆ ಇದೆ. ಮನಸ್ಸಿಲ್ಲದ ಮನಸ್ಸಿನಿಂದ, ಒತ್ತಾಯಕ್ಕೆ ಸಿಕ್ಕಿ ಕಾಯಿಯನ್ನು ಒತ್ತಿ ಹಣ್ಣು ಮಾಡುವ ಹಾಗೆ, ಅದರ ಪ್ರತಿಫಲವೋ ಎನ್ನುವ ಹಾಗೆ ಸರ್ಕಾರ ಈ ಕೆಲಸವನ್ನು ಮಾಡಿರುವುದರಿಂದ ಇವತ್ತು 17 ಜನ ಆಫೀಸರುಗಳು ಮನೆಗೆ ಹೋಗುತ್ತಿದ್ದಾರೆ. ಅಕೌಂಟೆಟ್ ಜನರಲ್ ಅವರು ಅವರ ಸಂಬಳವನ್ನು ಕೊಡುವುದಿಲ್ಲವೆಂದು ಹೇಳಿವ ಪರಿಸ್ಥಿತಿಯನ್ನುಂಟುಮಾಡಿರಬೇಕಾದರೆ ಸರ್ಕಾರ ಎಷ್ಟು ವಿಚಕ್ಷಣೆಯಿಂದ ತನ್ನ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದೆ ಎಂದು ಕೇಳಬೇಕಾಗಿದೆ.

10-30 A.M.

ಇಷ್ಟೆಲ್ಲ ಆದರೂ ಅಧಿಕಾರದಲ್ಲಿರುವ ಸರ್ಕಾರ ನಮ್ಮದು. ಈ ಸರ್ಕಾರದಲ್ಲಿ ನಮಗೆ ಅಚಲವಾದ ನಿಷ್ಠೆ ಇದೆ ಎಂದು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಇಡೀ ದೇಶಾದ್ಯಂತ ಇರತಕ್ಕ ಕಾಂಗ್ರೆಸ್ ಸರ್ಕಾರದಲ್ಲಿ ಇಡೀ ದೇಶದ ಪ್ರಜಾಕೋಟಿಯಲ್ಲಿ ಐದನೆಯ ಒಂದು ಭಾಗವಿರುವ ಹರಿಜನರಿಗೆ ಗಿರಿಜನರಿಗೆ ಅಚಲವಾದ ವಿಶ್ವಾಸವಿದೆ, ನಿಷ್ಠೆ ಇದೆ. ಕಾಂಗ್ರೆಸ್ ದೊಡ್ಡ ಸಂಸ್ಥೆ. ಅದರ ಹೆಸರಿನಲ್ಲಿ ಅಧಿಕಾರ ಮಾಡತಕ್ಕ ನಾವು ನಮ್ಮ ಸಂಸ್ಥೆಯು ಒಪ್ಪಿಕೊಂಡಿರತಕ್ಕ ತತ್ವಗಳನ್ನು ಬಹು ನಿಷ್ಠೆಯಿಂದ ಆಚರಣೆಗೆ ತರತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಆದುದರಿಂದ ನಮ್ಮ ಸರ್ಕಾರವನ್ನು ನಾನು ಅತಿ ವಿನಯದಿಂದ ಬೇಡಿಕೊಳ್ಳುತ್ತೇನೆ ; ಅನುಸೂಚಿತ ವರ್ಗಗಳಿಗೆ ಸೇರಿರತಕ್ಕ ನಮಗೆ ರಾಜ್ಯಾಂಗದತ್ತವಾದ ಸವಲತ್ತುಗಳೇನಿವೆ ಅವುಗಳನ್ನು ತಾವು ಲೆಕ್ಕಕ್ಕೆ ತೆಗೆದುಕೊಂಡು ಸಹೃದಯತೆಯಿಂದ, ಒಳ್ಳೆಯ ಮನಸ್ಸಿನಿಂದ ಅವುಗಳನ್ನು ಜಾರಿಗೆ ಕೊಟ್ಟು ಈಗಾಗಲೇ ನಿಷ್ಠೆ

(ಶ್ರೀ ಜಿ. ದುಗ್ಗಪ್ಪ)

ಯಿಂದ ಇರತಕ್ಕ ಜನ ಇನ್ನೂ ಹೆಚ್ಚು ನಿಷ್ಠೆಯಿಂದ ಇರುವಂತೆ—ಈಗಲೇ ಪೂರ್ತಿ ನಿಷ್ಠೆಯಿಂದ ಇದ್ದೇವೆ—ಮಾಡಿ ಅವರಿಗೆ ಸಲ್ಲತಕ್ಕಂಥ ಸವಲತ್ತುಗಳೆಲ್ಲ ಸಲ್ಲುವ ಹಾಗೆ ಮಾಡಬೇಕೆಂದು ಬೇಡಿಕೊಂಡು, ನಮ್ಮ ಸ್ನೇಹಿತರಾದ ಶ್ರೀ ಸರ್ವೆಶ್ ಅವರು ಸಭೆಯ ಮುಂದೆ ತಂದಿರತಕ್ಕ ಠರಾವನ್ನು ಅನುಮೋದಿಸುತ್ತ ಮತ್ತೆ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತೀವ್ರವಾಗಿ, ಇನ್ನು ಹೆಚ್ಚು ಕಾಲ ವಿಳಂಬ ಮಾಡದೆ ಇದನ್ನು ಜಾರಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ ಮತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ನನ್ನ ವಂದನೆಗಳನ್ನರ್ಪಿಸುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಳೆ (ನಂಕೇಶ್ವರ).–ಅಧ್ಯಕ್ಷರೇ, ನಾನು ಸಭೆಯ ಮುಂದಿರುವ ಸೂಚನೆಯನ್ನು ಅನುಮೋದಿಸುತ್ತ ಒಂದೆರಡು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈಗ ಸರ್ಕಾರದವರು ಏನು ಸವಲತ್ತುಗಳನ್ನು ಕೊಟ್ಟಿದ್ದಾರೆಯೋ ಅದರಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂದು ನನಗನ್ನಿಸುತ್ತದೆ. ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟು ನಾಲ್ಕೈದು ವರ್ಷಗಳಾದರೂ ಅದು ಇನ್ನೂ ತನಕ ಅಮಲುಬಜಾವಣೆಗೆ ಬರಲಿಲ್ಲ. ಆದರೆ ನಾನು ಒಂದು ಅರ್ಜಿಯನ್ನು ಲೇಖಣ ಮೂಲಕ ಕೊಟ್ಟಿದ್ದೇನೆ ಅದರ ವಿಚಾರಣೆ ಇನ್ನು ಆಗಿಲ್ಲ ನಮ್ಮ ಜನರಿಗೆ ಸರ್ವಿಸ್‌ನಲ್ಲಿ ನೂರಕ್ಕೆ 18 ಜನರಿಗೆ ಜಾಗ ಮೀಸಲು ಇಡಬೇಕೆಂದು ಯಾವ ಕಾನೂನು ಇದೆಯೋ ಅದರ ಪ್ರಕಾರವಾಗಿ ಈಗ ಹೊಸದಾಗಿ ಕೆಲಸಕ್ಕೆ ಸೇರುವವರಿಗೆ ಅನುಕೂಲವಾಗುತ್ತಿದೆ. ಆದರೆ ಸರ್ವಿಸ್ಸಿನಲ್ಲಿದ್ದವರಿಗೆ ಮಾತ್ರ ಈ ನೀತಿ ಅನ್ವಯವಾಗುತ್ತಿದೆ. ಸರ್ವಿಸ್‌ನಲ್ಲಿ ನೂರಕ್ಕೆ 18 ರಷ್ಟು ಸ್ಥಾನಗಳನ್ನು ಕಾದಿಡಬೇಕು ಮತ್ತು ಪ್ರಮೋಷನ್ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಹಿಂದೆ ಎಷ್ಟೋ ಸಲ ಹೇಳಿದ್ದರೂ ಈತನಕ ಅದನ್ನು ಜಾರಿಗೆ ಕೊಟ್ಟಿಲ್ಲ. ಅದೂ ಅಲ್ಲದೆ ಪ್ರತಿಯೊಂದು ಬಾಬುತ್ತಿನಲ್ಲಿಯೂ ಸರ್ವಿಸ್‌ನವ್ಲಾಗಲೀ, ಪ್ರಮೋಷನ್ ನವ್ಲಾಗಲೀ ಸರ್ಕಾರದವರು ದುರ್ಲಕ್ಷ್ಯ ಮಾಡುತ್ತಿದ್ದಾರೆ. ಬಿ. ಡಿ. ಓ. ಹುದ್ದೆಗಳನ್ನು ತುಂಬುವುದಕ್ಕೆ ಬೇಕಾದರೆ ನೂರಕ್ಕೆ 18 ರಂತೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ತುಂಬುತ್ತಾರೆಂದು ಹೇಳಿದ್ದಾರೆ. ಈ ತನಕ ಯಾವುದನ್ನು ತುಂಬಿಲ್ಲ ಮತ್ತು ಏನನ್ನು ಮಾಡಿಲ್ಲ. ಈಗ ಎಂಪ್ಲಾಯ್‌ಮೆಂಟ್ ಎಕ್‌ಸಂಜ್‌ನವರಾದರೂ ನೂರಕ್ಕೆ 18 ರಂತೆ ನಮ್ಮ ಜನರನ್ನು ತುಂಬಿದ್ದಾರೆಯೇ, ತುಂಬಿದ್ದರೆ ಯಾವ ಯಾವ ಆಫೀಸಿನಲ್ಲಿ ತುಂಬಿದ್ದಾರೆ ಎನ್ನುವ ಲಸ್ಟ್‌ನ್ನು ನಮ್ಮ ಮುಂದೆ ಇಟ್ಟಿಲ್ಲ. ಆದರಂತೆ ರೆವಿನ್ಯೂ ಇಲಾಖೆ, ಲೋಕೋಪಯೋಗಿ ಇಲಾಖೆ ಈ ಪ್ರತಿಯೊಂದು ಇಲಾಖೆಗಳಲ್ಲಿಯೂ ತುಂಬುತ್ತಾರೆಯೇ ಎಂದರೆ ಇನ್ನೂ ತುಂಬಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನದ ಮೇಲೆ ಇನ್ನೂ ಸಹ ಕ್ರಮ ತೆಗೆದುಕೊಂಡಿಲ್ಲ. ಇನ್ನು ಮುಂದಾದರೂ ಪ್ರಮೋಷನ್ ಕೊಡುವಾಗ ಸರ್ವಿಸ್‌ನಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಸ್ಥಾನಗಳನ್ನು ಕಾದಿಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ದುಗ್ಗಪ್ಪನವರು ಹೇಳಿದರು: ಸೋಷಿಯಲ್ ವೆಲಫೇರ್ ಆಫೀಸರುಗಳೆಂದು 17 ಜನರನ್ನು ಕೆಲಸಕ್ಕೆ ತೆಗೆದುಕೊಂಡು ಈಗ ಅವರನ್ನೆಲ್ಲ ಮನೆಗೆ ಕಳಿಸುವ ಸಂದರ್ಭವಿದೆ ಎಂದು. ಈ 17 ಮಂದಿಯನ್ನು ಕೆಲಸಕ್ಕೆ ತೆಗೆದು ಕೊಂಡಿರುವುದು ಕಾನೂನು ಬದ್ಧವಾಗಿಲ್ಲದಿದ್ದರೆ ಸರ್ಕಾರದವರು ಏನಾದರೂ ತಪ್ಪು ಮಾಡಿದ್ದರೆ ಅದನ್ನು ಅವರು ಸರಿಪಡಿಸಬೇಕಾಗಿತ್ತು. ಈಗ ನೇಮಕವಾಗಿರುವ 17 ಮಂದಿಯನ್ನು ಕೆಲಸದಲ್ಲಿ ಇಟ್ಟುಕೊಳ್ಳಬೇಕು. ಇಲ್ಲವಾದರೆ ಯಾವ ಯಾವ ಡಿಪಾರ್ಟ್‌ಮೆಂಟಿನಿಂದ ಬಂದಿರುವರೋ ಆ ಡಿಪಾರ್ಟ್‌ಮೆಂಟ್‌ಗಳಲ್ಲಿ ಅವರಿಗೆ ಭಡತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

1967 ನೇಯ ಇಸವಿಯಿಂದಾಚೆಗೆ ಹರಿಜನರಿಗೆ ಪ್ರತಿಯೊಂದರಲ್ಲಿಯೂ ಕಾದಿಟ್ಟ ಜಾಗ ಹೋಗುತ್ತದೆಂದು ನಿರ್ಬಂಧನೆ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಎನ್. ಇ. ಎಸ್. ನಲ್ಲಿ ನಮಗೆ ಬೇಕಾದ ಸವಲತ್ತುಗಳನ್ನು ಕೊಡಿಸುತ್ತೇವೆಂದು ಹೇಳುತ್ತಾ ನಮ್ಮ ಸಮಾಜದ ಮೇಲೆ ಅನ್ಯಾಯ ಮಾಡಿಹತ್ತಿರುವರು. ಈ ಪ್ರಕಾರ ನಾವು 15 ವರ್ಷಗಳನ್ನು ಕಳೆದು 16 ನೆಯ ವರ್ಷದಲ್ಲಿದ್ದೇವೆ. ಎಲ್ಲೆಲ್ಲಿ ಅನ್ಯಾಯವಾಗುತ್ತದೆ ಅದನ್ನು ಸರ್ಕಾರ ತುಂಬಿ ಕೊಡಬೇಕಾಗಿದೆ. ಹರಿಜನರ ವಿಷಯದಲ್ಲಿ ಯಾವ ಹಾಗೆಯೇ ಮಾಡಬೇಕಾಗಿದೆ. ಆದರೆ ಕೆಳಗಿನಿಂದ ಮೇಲಿನವರೆಗೂ ಇದರ ಅಮಲುಬಜಾವಣೆಯಾಗಿಲ್ಲವೆಂದು ಹೇಳುತ್ತೇನೆ. ಇದನ್ನು ನಾನು ಪ್ರತಿಯೊಂದು ವರ್ಷವೂ ಹೇಳುತ್ತಿದ್ದೇನೆ. ಇದರಲ್ಲಿ ಹರಿಜನರಿಗೆ ಅನ್ಯಾಯ ಆಗುತ್ತಿದೆ. ಅವನ ಕೈಯಿಂದ ರೆಕ್ಕೆಣಿಕೆ ಮುಟ್ಟಿಸುವಾಗ ಮನಃಪೂರ್ವಕವಾಗಿ ಮುಟ್ಟಿಸಬೇಕು ಮತ್ತು ಅಮಲನಲ್ಲಿ ತರುವ ವ್ಯವಸ್ಥೆ ಮಾಡಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಹರಿಜನ ಮಕ್ಕಳ ವಸತಿಗಾಗಿ ಹಾಸ್ಟೆಲುಗಳು ಏನೋ ಇವೆ. ಆದರೆ ದಿನೇ ದಿನೇ ಹರಿಜನ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ ಇದೆ. ಹರಿಜನರಿಗಾಗಿ ಇರುವ ಎಲ್ಲ ಯೋಜನೆಗಳಲ್ಲಿಯೂ ಹರಿಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಅದನ್ನು ಪರಿಹರಿಸ ಬೇಕೆಂದು ಮಾನ್ಯ ಸಚಿವೆಯರಾದ ಶ್ರೀಮತಿ ಯಶೋಧರಮ್ಮನವರಿಗೆ ವಿನಂತಿಮಾಡಿಕೊಳ್ಳುತ್ತೇನೆ. ಸೀನಿಯಾರಿಟಿ ಕೊಟ್ಟು ಬಿಡ್ತಿ ಕೊಡುವುದರಲ್ಲಿ ಹಿಂದುಳಿದವರಿಗಾಗಿ ಸ್ಥಾನ ಕಾಯ್ದಿಡಬೇಕು ಮತ್ತು ಶೇಕಡ 18 ರಷ್ಟು ಸ್ಥಾನಗಳನ್ನು ಕೊಡ ಬೇಕೆಂದು ವಿನಂತಿ ಮಾಡಿಕೊಂಡು, ಈ ನಿರ್ಣಯವನ್ನು ಅನುಮೋದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾರ್ಡೋಲಿ).—ಮಾನ್ಯ ಸಭಾಪತಿಗಳೇ, ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಜೆ. ಪಿ. ನರ್ವೇಶ್ ಅವರು ಮಂಡಿಸಿರುವ ಈ ನಾನ್-ಅಫೀಷಿಯಲ್ ರೆಜಲ್ಯೂಷನ್ನನ್ನು ಅನುಮೋದಿಸಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಶೇಕಡ 18 ರಷ್ಟು ಹರಿಜನ ಗಿರಿಜನರನ್ನು ಸರಕಾರಿ ನೌಕರಿಯಲ್ಲಿ ನೇಮಿಸಿಕೊಳ್ಳುವುದಾಗಲಿ, ಪ್ರಮೋಷನ್ ಕೊಡುವು ದಾಗಲಿ ಅನುಸರಿಸಿಕೊಂಡು ಬಂದಿಲ್ಲ ಎಂದು ಹೇಳುತ್ತೇನೆ. ಈ ಬಗ್ಗೆ ಅಸೆಂಬ್ಲಿಯಲ್ಲಿ ಸದಸ್ಯರೂ ಹೊರಗಡೆ ನಮ್ಮ ನಾಯಕರೂ ಸರಕಾರಕ್ಕೆ ಸಾಕಷ್ಟು ಹೇಳಿದ್ದಾರೆ. ಹರಿಜನರ ಬಗ್ಗೆ ಕಳಕಳಿ ವ್ಯಕ್ತ ಪಡಿಸಿ ಅದಷ್ಟು ಜಾಗ್ರತೆ ಸರಿಪಡಿಸುತ್ತೇವೆಂದು ನಮ್ಮ ನಾಯಕರು ಭರವಸೆ ಕೊಟ್ಟಿದ್ದಾರೆ. ಹೋದ ಸಲ ಬಜೆಟ್ ಚರ್ಚೆಯ ಕಾಲದಲ್ಲಿ ಭಾಷಣ ಮಾಡಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು ಸಾಕಷ್ಟು ಪ್ರಗತಿಪರವಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿದ್ದೇನೆ. ಆದರೆ ಸರಕಾರ ಒದಗಿ ಸಿರುವ ಅಂಕಿಸಂಖ್ಯೆಗಳಲ್ಲಿ ಏನೋ ಹೇಳಲಾಗಿದೆ. 1961ನೆಯ ಸಾಲಿನ ಅಂಕಿಅಂಶಗಳ ಆಧಾರದ ಮೇಲೆ ಹೇಳುವುದಾದರೆ ಅದರ ಶೇಕಡಾವಾರು ವಿವರ ಈ ರೀತಿ ಇದೆ :—

	ಕ್ಲಾಸ್ 1	2	3	4
ಎಲ್ಲ ಜಾತಿಯವರು	97.87	96.40	93.19	86.94
ಹರಿಜನರು	1.89	3.36	6.38	11.96
ಗಿರಿಜನರು	.24	0.24	0.43	1.10

ಕ್ಲಾಸ್ ಫೋರ್‌ನಲ್ಲಿಯೂ 7.71ರಷ್ಟು ಇದ್ದು ಅದೂ ಸಹ ಪರ್‌ಸೆಂಟೇಜಿಕ್ಕೆ ಮುಟ್ಟದೆ ಕಡಿಮೆಯಾಗಿದೆ. ಆದುದರಿಂದ ಎಲ್ಲೆಲ್ಲ ವೆಕನ್ಸಿ ಇವೆಯೋ ಅಲ್ಲೆಲ್ಲ ಕೂಡಲೇ ಭರ್ತಿ ಮಾಡಬೇಕೆಂದು ಸರಕಾರ ಆಜ್ಞೆ ಹೊರ ಡಿಸಬೇಕು. ಖಾಲಿ ಉಳಿದಿರುವ ಜಾಗಗಳನ್ನು ಅದಷ್ಟು ಜಾಗ್ರತೆ ಭರ್ತಿ ಮಾಡಬೇಕು, ಎಲ್ಲೆಲ್ಲ ಸಾಧ್ಯವೋ ಅಲ್ಲಿ ಲೋಕಲ್ ಕ್ಯಾಂಡಿಡೇಟ್ ಅನ್ನು ಭರ್ತಿ ಮಾಡಿಕೊಳ್ಳಬೇಕೆಂದು ಮೆಮೋರ್ಯಾಂಡಂ ಇಷ್ಯು ಮಾಡಬೇಕು. ಒಂದು ಅಫೀಷಿಯಲ್ ಮೆಮೋರ್ಯಾಂಡಂ ಇದ್ದರೂ ಅಧಿಕಾರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸಂಬಂಧಿಸಿದ ಮಂತ್ರಿಗಳಿಗೆ ನಾನು ಎಷ್ಟೋ ಸಲ ವಿನಂತಿ ಮಾಡಿಕೊಂಡಿದ್ದೇನೆ. ಆದರೂ ಅದರ ಬಗ್ಗೆ ಪ್ರಯತ್ನಿಸಿಲ್ಲಾ. ಸರಕಾರವು ಒಂದು ಮೆಮೋ ಹೊರಡಿಸಿದ್ದು ಅದು ಹೀಗೆ ಇದೆ :

> "Local candidates are being employed now till the prescribed ratio of three per cent and fifteen per cent are attained. For this purpose, the appointing authorities are requested to obtain from the Employment Exchanges list, of candidates belonging S.C. and S.T. and appoint them as local candidates. Whenever S.C. and S.T. candidates are available for recruitment for any cadre, they should be appointed against the reserved places in the cadre."

ಹೀಗೆ ಸರಕಾರವು ಮೆಮೋ ಹೊರಡಿಸಿದ್ದರೂ ಅಧಿಕಾರಿಗಳು ಲಕ್ಷ್ಯ ಕೊಟ್ಟಿಲ್ಲ ಮೇಲಾಧಿ ಕಾರಿಗಳ ಅಲಕ್ಷ್ಯತನದಿಂದ ಹಿಂದುಳಿದ ಜನಾಂಗಕ್ಕೆ ಅನ್ಯಾಯವಾಗುತ್ತಿದೆ. ಯಾವ ಅಧಿಕಾರಿಗಳು ಇಂಥವರ ಬಗ್ಗೆ ಲಕ್ಷ್ಯ ಹೊರತಿನವರೋ ಅಂಥವರ ಮೇಲೆ ಯೋಗ್ಯಕ್ರಮ ಕೈಕೊಳ್ಳುವ ಒಂದು ವಿಧಾನವನ್ನು ಪಾಸು ಮಾಡುವುದು ಒಳಿತು ಎಂದು ಎನಿಸಿದೆ. ಆದಕಾರಣ ಸರಕಾರವು ಒಂದು ಕ್ರಮ ಕೈಕೊಳ್ಳುವ ವಿಧೇಯಕವನ್ನು ಪಾಸುಮಾಡಬೇಕು. ಸರಕಾರ ಇದನ್ನು ಕೂಲಂಕಷ ವಾಗಿ ವಿಚಾರಮಾಡಿ ಈ ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ಯಾವ ರೀತಿ ಅಬ್ಸಾರ್ಬ್ ಮಾಡ ಬೇಕೆಂಬುದನ್ನು ಯೋಚನೆ ಮಾಡಬೇಕು.

(ಶ್ರೀ ಜೆ. ಎಲ್. ಕಬಾಡಿ)

ಇನ್ನು ಸುಪ್ರೀಂ ಕೋರ್ಟು ಸ್ಪೇಟಸ್ಕೋ ಮೆಂಟೇನ್ ಮಾಡಬೇಕೆಂದು ಹೇಳಿದೆ.

"Nothing in the article shall prevent the State Government from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

ಈ ವಿಷಯದಲ್ಲಿ ತೀರ್ಮಾನವಾಗಿ ಎರಡು ವರ್ಷವಾದರೂ ಯಾವ ಕಾರ್ಯಕ್ರಮವನ್ನು ತೆಗೆದು ಕೊಂಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. 21—4—1961ರಲ್ಲಿ ಸುಪ್ರೀಂ ಕೋರ್ಟ್ ನಿರ್ಣಯ ಹೊರಬಿದ್ದಿದೆ. ಇದರ ಬಗ್ಗೆ ಕೇಂದ್ರ ಸರಕಾರ ಸಹ ನಿರ್ಣಯ ತೆಗೆದುಕೊಂಡಿದೆ. ಈ ನಿರ್ಣಯದ ಪ್ರತಿಯನ್ನು ನಾನು ಮಂತ್ರಿಗಳಿಗೂ ಉಪಮಂತ್ರಿಗಳಿಗೂ ಸರ್ಕ್ಯುಲೇಷನ್‌ಗಾಗಿ ಕಳಿಸಿ ಕೊಟ್ಟಿದ್ದೇನೆ. ಅದಕ್ಕೆ ಉತ್ತರ ಈ ರೀತಿ ಬಂದಿದೆ :

"With reference to letter...The matter has to be studied with reference to the provisions of articles 16 (1) (2) (3) (4) and 335 of the Constitution. It will be possible to take a decision on the matter at the State level after the Government of India intimates their decision in the matter."

ನಮ್ಮ ಸರಕಾರ ಕೇಂದ್ರ ಸರಕಾರದ ಆದೇಶವನ್ನು ನಿಯಮಕ್ಕೆ ಅನುಸಾರವಾಗಿ ಕೇಳಬೇಕಾದುದು ನ್ಯಾಯ. ಅದನ್ನು ಕೇಳಿದ್ದಾರೆ. ಆದರೆ ಪ್ರಮೋಷನ್ ಕೊಡುವ ವಿಚಾರದಲ್ಲಾಗಲೀ, ಪರ್ಸೆಂಟೇಜ್ ಕೀಪ್‌ಅಪ್ ಮಾಡುವ ವಿಷಯದಲ್ಲಾಗಲೀ ಆಂಧ್ರ ಚೀಫ್ ಮಿನಿಸ್ಟರವರು ಆರ್ಟಿಕಲ್ 335ನ್ನು ಇಂಪ್ಲಿಮೆಂಟ ಮಾಡಿಬಿಟ್ಟ ಹಾಗೆ ನಮ್ಮ ಸರಕಾರವಾದರೂ ಜಾರಿಗೆ ತರಬಹುದಾಗಿತ್ತು. ಮಾಡಬೇಕೆಂದು ಮನಸ್ಸು ಮಾಡಿದರೆ ಮಾತ್ರ ಸಾಧ್ಯ ಹೊರತು ಏನಾದರೊಂದು ನೆಪ ಹೇಳಿ ಯಾರ ಮೇಲಾದರೂ ಹಾಕುವುದು ಸರಿಯಲ್ಲ.

ನಿಯಮಕ್ಕನುಸಾರವಾಗಿದ್ದರೆ ಆಗ ನಾವು ಯಾರನ್ನೂ ಕೇಳಬೇಕಾಗಿಲ್ಲ. ಸುಪ್ರೀಂ ಕೋರ್ಟ್ ನಿರ್ಣಯವೆಂತಿದೆಯೋ ಶ್ರೇಷ್ಠ ನ್ಯಾಯಾಧೀಶರ ಆ ಆಜ್ಞೆಯನ್ನನುಸರಿಸಿ ಮಾಡಬೇಕಾದ್ದು ನ್ಯಾಯ. ಆದರೆ ಈಗ ಅದಕ್ಕನುಸಾರವಾಗಿ ಮಾಡುತ್ತಾ ಇಲ್ಲ. ನಾವು ತತ್ವಶಃ ಎಲ್ಲವನ್ನೂ ಅದೇ ರೀತಿ ಮಾಡಬೇಕೆಂದು ಹೇಳುವುದಿಲ್ಲ. ಏಕೆಂದರೆ ನಾವು ಮನುಷ್ಯರಾಗಿ ಹರಿಜನರು ಇತರರಿಗೆ ಸರಿ ಸಮಾನರಾಗಿ ಬರಬೇಕೆನ್ನುವ ಉದ್ದೇಶದಿಂದ ಆ ರೀತಿಯಲ್ಲಿ ಮನಃಪರಿವರ್ತನೆ ಆದರೆ ಸಾಧ್ಯವಾಗುತ್ತದೆ ಎಂದು ನನಗೆ ಅನಿಸುತ್ತದೆ. ಈಗ ಏನಾಗಿದೆ ? ಕೆಲವೊಂದು ಪ್ರಮೋಷನ್ ಆಗಲಿ, ಕೇಡರ್ ರೆಕ್ರೂಟ್‌ಮೆಂಟ್ ಆಗಲಿ ನ್ಯಾಯವಾದ ದೃಷ್ಟಿಯಲ್ಲಿ ಮಾಡಬೇಕಾದರೆ ಆಫೀಸರುಗಳು ಸಹಿತ ಕೆಲವೊಂದು ಸಾರಿ ತಪ್ಪು ದಾರಿಗೆ ಎಳೆಯುವ ಸಂಭವ ಇದೆ. ಹರಿಜನರಿಗಾಗಿ ಯಾವುದೇ ಅಪಾಯಿಂಟ್‌ಮೆಂಟು ಮಾಡಿದರೂ ತಪ್ಪು ಮಾಡಿದ್ದಾರೆ ಎಂದು ಯಾವುದಾದರೊಂದು ಕಲಮು ಅನ್ವಯಿಸಿ ಹೇಳಿ ಅದು ಹೋಗಬೇಕು ಎಂದು ಹೇಳಿದಂತಾಗುತ್ತದೆಯೇ ಹೊರತು ಅದನ್ನು ಹೇಗೆ ರೆಗ್ಯೂಲರೈಸ್ ಮಾಡಬೇಕೆನ್ನುವುದನ್ನು ಯಾರೂ ಯೋಚನೇನೆ ಮಾಡುವುದಿಲ್ಲ. ಈ ಬಗ್ಗೆ ಯಾವರೀತಿ ಕೇಳಿಕೊಳ್ಳಬೇಕೆಂಬುದು ಗೊತ್ತಾಗುತ್ತಾ ಇಲ್ಲ. ಶ್ರೀಮಾನ್ ನರ್ವೇಶ್ ಅವರು ಹೇಳುತ್ತಾ ಇದ್ದರು ಬುದ್ಧ, ಗುರುನಾನಕ್, ಬಸವೇಶ್ವರ ಇವರೆಲ್ಲಾ ಒಂದು ತತ್ವದ ಮೇಲೆ ಧರ್ಮವನ್ನು ಸ್ಥಾಪಿಸಿದ್ದರೂ ಸ್ವರ್ಣಿಯರು ಅದನ್ನು ತಮ್ಮ ತಮ್ಮ ಜಾತಿಯೆನ್ನಾಗಿ ಮಾಡಿಕೊಂಡು ಬಂದರು ಎಂದು. ನಿಜ, ತತ್ವಗಳು ಎಲ್ಲರಿಗೂ ಒಂದೇ, ಮನುಷ್ಯನಿಗೆ ಬೇಕಾದ ತತ್ವಗಳು ಸತ್ಯ, ನಿಷ್ಠೆ, ಧರ್ಮ. ಇವು ಎಲ್ಲರಿಗೂ ಇರುತ್ತವೆ. ಆದರೆ ಅದನ್ನೇ ಜಾತಿಯೆನ್ನಾಗಿ ಮಾಡಿಕೊಳ್ಳಬೇಕಾದಿಲ್ಲ. ಆ ತೂ ಅದು ಈಗ ಜಾತಿಯಾಗಿ ಮಾರ್ಪಾಡಾಗಿ ನಡೆಯುತ್ತಾ ಇದೆ ಎಂದು ಅವರು ಹೇಳಿದ್ದು ಕೆಲವೊಂದು ಮಟ್ಟಿಗೆ ನಿಜ. ಹಿಂದುಳಿದವರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಲು ಮುಂದುವರಿದವರು ಮಾರ್ಗದರ್ಶನ ಮಾಡಬೇಕಾದರೆ ಅವರ ಮನೋವೃತ್ತಿ ಬದಲಾಗದ ಹೊರತು ಆಗುವುದಿಲ್ಲ. ಶ್ರೀಮಾನ್ ದುಗ್ಗಪ್ಪ ನವರು ಹದಿನೇಳು ಜನ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ವಾಪಸು ಕಳುಹಿಸಿದರು ; ಆ ಹುದ್ದೆಗಳು ಹಾಗೆಯೇ ಇವೆ ಎಂದು ಹೇಳಿದರು. ಈ ಹದಿನೇಳು ಜನರನ್ನು ಯಾವರೀತಿ ಅಪಾ-

ಯಿಂಟ್ ಮಾಡಿದರು ಆ ರೀತಿ ಮಾಡಿದ್ದು ಯಾವ ರೀತಿ ಇರ್ರೆಗ್ಯೂಲರ್ ಆಗಿತ್ತು ಎಂಬುದು ಗೊತ್ತಿಲ್ಲ. ಅದರೆ ಕೇವಲ ಯಾವುದಾದರೂ ಒಬ್ಬ ಆಫೀಸರು ಕೆಲವೊಂದು ಮುಟ್ಟಿಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಅಂತಹವರನ್ನು ಮನೆಗೆ ಕಳುಹಿಸೋಣ. ಸರ್ಕಾರದಲ್ಲಿ ಯಾರಾದರೂ ಒಬ್ಬ ಆಫೀಸರು ತಪ್ಪು ಮಾಡಿದರೆ ಅವರನ್ನು ಮನೆಗೆ ಕಳುಹಿಸುವುದಕ್ಕೆ ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತವ ಗೆ ಅಧಿಕಾರ ಇದ್ದೇ ಇದೆ. ಹಾಗಲ್ಲದೆ ಒಬ್ಬನು ಕೆಟ್ಟವನಾಗಿ ಉಳಿದವರು ಒಳ್ಳೆಯವರಾಗಿದ್ದರೂ ಅವರೆಲ್ಲರೂ ಮನೆಗೆ ಹೋಗಬೇಕೆಂದರೆ ಅದು ಸರಿಯಲ್ಲ. ಇದನ್ನೆಲ್ಲ ಸಂಬಂಧಿಸಿದ ಮಂತ್ರಿಗಳು ತಿಳಿದುಕೊಂಡು ಕಾರ್ಯ ಮಾಡಬೇಕಾಗಿತ್ತು.

Sri B. D. JATTI (Minister for Finance).—May I clarify ? The appointments of about 17 officers that were made by the Government of Mysore were temporary appointments. They were to be recruited though the Public Service Commission. If Government had decided that the recruitment should be according to the procedure laid down, why should the Hon'ble Member object to it I don't understand.

† **Sri K. H. RANGANATH** (Mudigere).—The Finance Minister was pleased to say that those appointments were temporary. May I invite the attention of the Hon'ble Minister to the Government order issued some where in 1962 which specifically says that the appointments made prior to 1-1-1960 to class III posts must be confirmed ? There is such a Government Order which is still in force. In fact, that Government Order is challenged in the High Court. I am aware of it. My point is, what action Government took in pursuance of that Government Order in regularising the Class III posts in respect of which recruiments were made prior to 1-1-1960. In fact, all these appointments of these 17 officers of the Scheduled Castes are made under that Government Order.

Sri B. D. JATTI.—The Cader and Recruitment Rules were not framed. After those rules were framed and approved, regular appointments would have to be made. Even these 17 officers may be allowed to apply to the Public Service Commission. Beyond that, nothing can be done.

Sri K. H. RANGANATH.—My point is this : what did the Government do in pursuance of that Government Order in regularising those posts ? Government have not taken action. Subsequently, they framed the Cadre and Recruitment Rules. To-day they say that those appointments cannot be regularised according to the Cadre and Recruitment Rules.

Sri B. D. JATTI.—The question of regularising those 17 appointments does not arise at all, because at that time there were no Cadre and Recruitment Rules. There might be delay on the part of Government in preparing the Rules ; but once the rules are framed and approved by Government, those rules alone are applicable. If a Government servant has got an opportunity to work due to the delay on the part of the Government he should thank his stars because he is allowed to work for so many years.

Sri K. H. RAGANATH.—I r fute specifically that sort an argument. Government has time and again said that they are prepared to safeguard the interests of the Scheduled Caste people. I want to show to this House by this one incident how Government has been neglecting the interests of the Scheduled Caste people. In respect of all these appointments, they have not taken any action. The Minister says that the Cadre

(SRI K. H. RANGANATH)

and Recruitment Rules have come in the way of regularising them. If the matter is before the High Court, where is the hurry to take action against those officers only ?

SRI B. D. JATTI.—If any matter is pending before the High Court whatever decision is given by the High Court is accepted and immediately implemented. That is No. 1. No. 2: As far as illegalities are concerned, the Hon'ble Member cannot suggest that illegality should be legalised. My clarification pertains to only those 17 officers appointed temporarily. I have not said regarding any other officers at all.

11-00 A.M.

Here, that question does not arise. He may say generally what the Government ought to have done and what the Government should do. But, regarding these 17 officers, these officers were appointed temporarily. Because there was delay on the part of the Government in preparing the Cadre and Recruitment Rules, they were continued. When a person is appointed temporarily for a paritucular period, he could be removed from the post even without giving notice. There is no question of giving him notice.

ಶ್ರೀ ಜೆ. ಎಲ್. ಕಬಾಡಿ.—ಶ್ರೀ ರಂಗನಾಥ ಅವರು ಹೇಳಿದಹಾಗೆ ಸರ್ಕಾರದವರು ಮನಸ್ಸು ಮಾಡಿದ್ದರೆ ಆ 17 ಹುದ್ದೆಗಳನ್ನು ರೆಗ್ಯುಲರೈಜ್ ಮಾಡುವುದಕ್ಕೆ ಬರುತ್ತಿತ್ತು. ಈಗ ತಾನೆ ಮಾನ್ಯ ಆರ್ಥಿಕ ಸಚಿವರು ಹಂಗಾಮಿಯಾಗಿ ಕೆಲಸಕ್ಕೆ ತೆಗೆದುಕೊಂಡವರನ್ನು ಖಾಯಂ ಮಾಡಲೇಬೇಕೆಂಬ ನಿಯಮವಿಲ್ಲ ಎಂದು ಹೇಳಿದರು. ಹೋಗಲಿ, ಈಗ ಸುಪ್ರೀಂ ಕೋರ್ಟಿನವರು ಕೊಟ್ಟಿರತಕ್ಕ ತೀರ್ಮಾನದ ಪ್ರಕಾರವಾದರೂ ಈ ಕೋಮುಗಳವರಿಗೆ ನಿಗದಿ ಮಾಡಿರತಕ್ಕ ಪರ್ಸೆಂಟೇಜ್ ಆಫ್ ಅಪಾಯಿಂಟ್‌ಗಳೇನಿವೆ ಅವುಗಳನ್ನೂ ಸಹ ಈ ಸರ್ಕಾರ ಕೊಡುತ್ತಿಲ್ಲ ಎಂಬುದನ್ನು ನಾವು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಆ 17 ಜನ ಅಧಿಕಾರಿಗಳನ್ನು ಆರ್ಟಿಕಲ್ 320 (4)ರ ಪ್ರಕಾರ ಲೀಗಲ್ ಆಗಿ ರೆಗ್ಯುಲರೈಜ್ ಮಾಡುವುದಕ್ಕೆ ಬರುತ್ತಿತ್ತು. ಆರ್ಟಿಕಲ್ 320 (4)ರಲ್ಲಿ ಹೀಗೆ ಹೇಳಲಾಗಿದೆ :

Article 320(4) says :

"Nothing in clause (2) shall require a Public Service Commission to be consulted as respects the manner in which any provision referred to in clause (4) of article 16 may be made or as respects the manner in which effec may be given to the provisions of article 335."

ಈ ಪ್ರಕಾರ ಅವನ್ನು ಮಾಡಿಕೊಳ್ಳುವುದಕ್ಕೆ ಬರುತ್ತಿತ್ತು. ಒಂದಾವರ್ತಿ ಒಂದು ಕೆಲಸದ ಅನುಕೂಲಕ್ಕಾಗಿ ತೆಗೆದುಕೊಂಡ ಜನರಿಗೆ ಅವರು ಹಂಗಾಮಿ ಕೆಲಸಗಾರರಾಗಿದ್ದರೆ ಅಂಥವರನ್ನು ಯಾವಾಗಬೇಕಾದರೂ ಕೆಲಸದಿಂದ ತೆಗೆಯಬಹುದೆಂದು ಹೇಳಿದರು. ಆದರೆ ಅಂಥ ಜನರಿಗೆಲ್ಲ ಸರ್ಕಾರ ಮದ್ರಾಸ್, ಟಾಟಾ ಇನಸ್ಟಿಟ್ಯೂಟ್ ಇಂಥ ಕಡೆಗಳಿಗೆಲ್ಲ ಕಳುಹಿಸಿ ಬಹಳ ಹಣವನ್ನು ವೆಚ್ಚ ಮಾಡಿ ಟ್ರೈನಿಂಗ್ ಕೊಡಿಸಿರುತ್ತಾರೆ. ಹಾಗೆ ಟ್ರೈನಿಂಗ್ ಹೊಂದಿದ ಜನರನ್ನು ತೆಗೆದನಂತರ ಆ ಕೆಲಸಕ್ಕೆ ಯೋಗ್ಯರಾದ ಜನ ಇವರಿಗೆ ಮತ್ತೆಲ್ಲಿ ಸಿಗುತ್ತಾರೆ ? ಶ್ರೀ ದುಗ್ಗಪ್ಪನವರು ಹೇಳಿದ ಹಾಗೆ ಮನಸಿದ್ದಲ್ಲಿ ಮಹಾದೇವನಿರುತ್ತಾನೆಂದು ಹೇಳುವಂತೆ, ಆ ಜನರನ್ನು ಸರ್ಕಾರ ಮನಸ್ಸು ಮಾಡಿದ್ದರೆ ನೌಕರಿಯಲ್ಲೇ ಇಟ್ಟುಕೊಳ್ಳಬಹುದಾಗಿತ್ತು. ಆದರೆ ಅನೇಕ ವರ್ಷಗಳಕಾಲ ಗೆಜೆಟೆಡ್ ನೌಕರಿಯಲ್ಲಿದ್ದ ಆ ಜನರನ್ನು ತೆಗೆದು ಗುಮಾಸ್ತೆಗಿರಿ ಕೆಲಸಕ್ಕೆ ಹಾಕಿದರೆ ಯಾರಿಗೆ ತಾನೆ ಮನಸ್ಸು ನೋಯು

ವುದಿಲ್ಲ ? ಸರ್ಕಾರಕ್ಕೆ ಇಂಥ ಪ್ರವೃತ್ತಿ ಖಂಡಿತ ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಇದಕ್ಕೆಲ್ಲ ಮೂಲ ಕಾರಣ ಹಿಂದೆ ಆ ಬ್ರಿಟಿಷರಿದ್ದ ಕಾಲದಿಂದಲೂ ಆಡಳಿತದಲ್ಲಿ ಇರತಕ್ಕ ಕೆಲವು ಅಧಿಕಾರಿಗಳೇ ನಿಮ್ಮಾರೆ ಅವರು ಅಷ್ಟು ಜನಾನುರಾಗಿಗಳಲ್ಲ. ಈ ಜನರಿಗೆ ಅನುಕೂಲ ಕಲ್ಪಿಸಲು ಬೇರೆ ಬೇರೆ ಅನೇಕ ಅಜೆಂಡಾಗಳಿದ್ದರೂ ಅವರು ಅವುಗಳನ್ನು ಮಂತ್ರಿಗಳ ಗಮನಕ್ಕೆ ತರುವುದಿಲ್ಲ. ಅಲ್ಲದೆ ಹರಿಜನ ಆಫೀಸರುಗಳಿಗೆ ಹಕ್ಕಿನಿಂದ ಸಿಕ್ಕತಕ್ಕದ್ದನ್ನು ದೊರಕಿಸಿ ಕೊಡದೆ ತದ್ವಿರುದ್ಧವಾಗಿ ಅವರು ತೊಂದರೆ ಕೊಟ್ಟಿರತಕ್ಕ ನಿದರ್ಶನಗಳಿವೆ. ಇನ್ನಾದರೂ ಯಾವ ಅಧಿಕಾರಿಗಳೇ ಆಗಲಿ ಇಂಥ ಕೆಲಸ ಮಾಡಬಾರದೆಂದು ಅವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮೇಲಾಗಿ ವೃತ್ತ ಪತ್ರಿಕೆಗಳವರೂ ಇಂಥ ವಿಚಾರಗಳ ಬಗ್ಗೆ ಸಾಕಷ್ಟು ಪ್ರಚಾರ ನಡೆಸುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಂಥ ವಿಚಾರಗಳೂ ಎಷ್ಟೆಷ್ಟು ಪ್ರಚಾರವಾದರೆ ಅಷ್ಟೂ ಜನರ ಹೃದಯ ಪರಿವರ್ತನೆಯಾಗುತ್ತದೆ. ಅದರಿಂದ ಈ ಜನಗಳಿಗೆ ಆದು ಹೆಚ್ಚಿನ ಒಂದು ರೀತಿಯಿಂದ ಸಹಾಯ ಆಗುತ್ತದೆ. ಇಷ್ಟು ಮಾತನ್ನು ಆಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ, ಶ್ರೀ ಸವೇ್ರಶ ಅವರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನಿತ್ತು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡುಬಿದರೆ).—ಸನ್ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಬಂದಿರತಕ್ಕ ನಿರ್ಣಯ ಒಂದು ದಲಿತವರ್ಗದವರ ಅಥವಾ ದೀನದಲಿತ ಜನಾಂಗದವರ ಒಂದು ಘೋರತರದ ಜೀವನ ಸಮಸ್ಯೆಗೆ ಸಂಬಂಧಪಟ್ಟಿದ್ದಾಗಿದೆ. ಈ ದಿವಸ ವಿರೋಧ ಪಕ್ಷದ ಸದಸ್ಯರು ಈ ನಿರ್ಣಯವನ್ನು ತಂದು ಎಷ್ಟೆ ಚರ್ಚೆಮಾಡಿದ್ದರೂ ಇದು ಅಷ್ಟು ಪರಿಣಾಮಕಾರಿಯಾಗಿರುತ್ತಿರಲಿಲ್ಲ, ಇದಕ್ಕೆ ಈಗ ದೊರೆಯುವಷ್ಟು ಮಾನ್ಯತೆ ದೊರೆಯುತ್ತಿರಲಿಲ್ಲವೆಂಬ ಒಂದು ದೃಷ್ಟಿಯಿಂದ ಇಲ್ಲಿಯ ತನಕ ಈ ಪಕ್ಷಕ್ಕೆ ಸೇರಿರತಕ್ಕ ನಾವುಗಳು ಇಂಥ ಒಂದು ನಿರ್ಣಯವನ್ನ ತರುವುದರಲ್ಲಿ ಹಿಂದುಳಿಯಬೇಕಾಯಿತು. ಆಡಳಿತವರ್ಗಕ್ಕೆ ಸೇರಿರತಕ್ಕ ಸದಸ್ಯರೇ ಇಂಥ ಒಂದು ನಿರ್ಣಯವನ್ನು ಸಭೆಯ ಮುಂದೆ ತಂದು, ಇದರಬಗ್ಗೆ ಈ ಪರಿಸಕ್ತವರ್ಗದ ಸದಸ್ಯರೆಲ್ಲರೂ ಒಮ್ಮತವಿಂದ ತಮ್ಮ ಬೆಂಬಲವನ್ನು ನೀಡಿದಾಗ್ಗೂ, ಹಾಗೂ ಈ ಮಾನ್ಯ ಸಭೆಯವರು ಈ ದೀನದಲಿತ ಜನಾಂಗದವರ ಬಗ್ಗೆ ಹಾಗೂ ಹಿಂದುಳಿದವರ್ಗಗಳ ಬಗ್ಗೆ ಯಾವ ಒಂದು ನೀತಿ, ಒಂದು ಧೋರಣೆಯನ್ನು ಅನುಸರಿಸಬೇಕೆಂಧು ತಿಳಿಸಿದ್ದಾಗ್ಗೂ ಆಡಳಿತ ನಡೆಸುತ್ತಿರುವ ಸರ್ಕಾರದ ಮನೋಭಾವ ಯಾವ ರೀತಿ ಇದೆ ಎಂಬುದನ್ನು ತಿಳಿಯುವುದು ಬಹಳ ಕಷ್ಟವಾಗಿದೆ. ಈ ದಲಿತವರ್ಗದವರ ವಿಚಾರದಲ್ಲಿ ವಿದ್ಯಾವಂತ ರಿರತಕ್ಕ ಸರ್ಕಾರದವರ ಹೃದಯವೇ ಇನ್ನೂ ಪರಿವರ್ತನೆಯಾಗಲಿಲ್ಲ ಎನ್ನುವಾಗ ಇನ್ನು ಅವಿದ್ಯಾವಂತ ಜನರ ಹೃದಯವೆಷ್ಟರಮಟ್ಟಿಗೆ ಪರಿವರರ್ತನೆ ಆಗಿದೆ ಎಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ಈ ವಿಷಯವನ್ನು ನಾನು ಪಕ್ಷದೊಳಗೂ, ಹೊರಗೂ ಇದ್ದು ನೋಡಿದ್ದೇನೆ. ವಿದ್ಯಾವಂತ ಮುಂದಾಳುಗಳಲ್ಲಿ ನೈತಿಕ ಧೈರ್ಯವಿಲ್ಲ. ಆದುದರಿಂದ ಅವರ ಹೃದಯ ಪರಿವರ್ತನೆಯಾಗದೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಈ ದಲಿತವರ್ಗದವರ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ವಿಚಾರದಲ್ಲಿ ಸುಪ್ರೀಂ ಕೋರ್ಟು ಮತ್ತು ಅನೇಕ ಹೈಕೋರ್ಟುಗಳೂ ತೀರ್ಮಾನ ಕೊಟ್ಟಿವೆ. ನಮ್ಮ ಸರ್ಕಾರ ಆ ತೀರ್ಮಾನಕ್ಕೆ ಅನುಗುಣವಾಗಿ ಕೆಲಸ ಮಾಡಿದ್ದರೂ ಸಾಕಾಗಿತ್ತು. ಈಗ ಅಷ್ಟನ್ನೂ ಸಹ ಮಾಡುತ್ತಿಲ್ಲ ಎಂದು ನಾವು ಬಹಳ ವ್ಯಸನದಿಂದ ತಿಳಿಸಬೇಕಾಗಿದೆ. ನಮ್ಮ ರಾಜ್ಯಾಂಗವನ್ನು ಈವರೆಗೆ 17 ಸಾರಿ ಬದಲಾವಣೆ ಮಾಡಲಾಗಿದೆ. ರಾಜ್ಯಾಂಗದಲ್ಲಿ ಅಡಕವಾಗಿರತಕ್ಕದನ್ನು, ಕೋರ್ಟಿನಲ್ಲಿ ತೀರ್ಮಾನವಾದಂಥ ವಿಚಾರಗಳನ್ನು ಜಾರಿಗೆ ಕೊಡಲು ನಮ್ಮ ಸರ್ಕಾರಕ್ಕೆ ಧೈರ್ಯವಿಲ್ಲದೆ ಹೇಡಿತನದಿಂದ ಏಕೆ ವರ್ತಿಸಬೇಕು ?

ಇದು ಕೇವಲ ದಲಿತ ವರ್ಗದ ಹಾಗೂ ಹಿಂದುಳಿದ ವರ್ಗದ ವಿಚಾರ ಮಾತ್ರವಲ್ಲ. ಇಡೀ ರಾಷ್ಟ್ರದ ಪ್ರಶ್ನೆ. ಇವರ ಸ್ಥಾನಮಾನಗಳನ್ನು ಉನ್ನತಮಟ್ಟಕ್ಕೇರಿಸಬೇಕೆನ್ನುವ ಪ್ರಯತ್ನಗಳನ್ನು ಮಾಡದೇ ಹೋದರೆ ಈ ಜನಕ್ಕೆ ಬಹಳ ಅನ್ಯಾಯಮಾಡಿದಂತಾಗುತ್ತದೆ. ಇದನ್ನು ಪ್ರತಿಭಟಿಸದಿದ್ದರೆ, ಈ ಸರಕಾರ ಜಯಪ್ರದವಾಗಿ ಮಾಡದೇ ಹೋದರೆ ಇದು ಇಡೀ ರಾಷ್ಟ್ರಕ್ಕೆ ಮಾಡಿದ ದ್ರೋಹವಾಗುತ್ತದೆ, ಎನ್ನುವುದು ಇಲ್ಲಿ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಆಡಳಿತ ವರ್ಗದವರು ಈ ದಲಿತ ವರ್ಗದವರನ್ನು ಮುಂದಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಿರುವುದರಿಂದ ಈ ವರ್ಗದ ಜನರು ಎಚ್ಚೆತ್ತು ತಮ್ಮ ಕಣ್ಣುಗಳನ್ನು ತೆರೆದು ಮುಂದೆ ಬರುತ್ತಿದ್ದಾರೆ. ಇದು ದಲಿತ ವರ್ಗದವರ ಒಂದು ಪುಣ್ಯ. ಐದನೇ ಒಂದು ಭಾಗದಷ್ಟಿರುವ ಈ ನಮ್ಮ ಜನಾಂಗವನ್ನು ಈಗಲಾದರೂ ಎಚ್ಚರಗೊಳ್ಳುವಂತೆ ಮಾಡಲು ಸರಕಾರ ಸ್ವಲ್ಪ ಸಹಾಯ ಮಾಡಬೇಕು. ಈಗಾಗಲೇ ಅಖಿಲ ಭಾರತ ಡಿಪ್ರೆಸ್ಡ್‌ಕ್ಲಾಸ್ ಬೋರ್ಡಿನವರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಮೊನ್ನೆತಾನೇ 23 ಮಂದಿ ನಮ್ಮ ರಾಜ್ಯದ Scheduled Caste Planning and Advisory Board ನ ಸದಸ್ಯರಾಗಿದ್ದವರು ರಾಜೀನಾಮೆ ಕೊಟ್ಟಿರುವುದು ಎಲ್ಲರಿಗೂ

(ಶ್ರೀ ಗೋಪಾಲ ಸಾರೆನ್ನ)

ಈಗಾಗಲೇ ತಿಳಿದಿದೆ, ಅವರೆಲ್ಲ ಈ ನಿರ್ಣಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ವಿವರವಾಗಿ ಪ್ರಕಟಪಡಿಸಿ ತಿಳಿಸುವುದು ಅವಶ್ಯವಾಗಿದೆ. ಇದು ಇಡೀ ರಾಜ್ಯದಲ್ಲಿರುವ ದಲಿತ ವರ್ಗದವರ ಒಮ್ಮತದ ಅಭಿಪ್ರಾಯ. ಈ ಬಗ್ಗೆ ಸರಕಾರ ಯೋಗ್ಯವಾದ ರೀತಿಯಲ್ಲಿ ತಮ್ಮ ಒಪ್ಪಿಗೆಯನ್ನು ಕೊಡುವುದು ಅಗತ್ಯ. ಅಷ್ಟು ಮಾತ್ರವಲ್ಲ. ಇದರಲ್ಲಿ ಸಾಧ್ಯವಾದಮಟ್ಟಿಗೂ ಜಾಗೃತಿಯಿಂದ ಈ ಜನರಿಗಾಗುತ್ತಿರುವ ಅನ್ಯಾಯಗಳನ್ನು ಶೋಷಣೆಗಳನ್ನು ನಿವಾರಣೆ ಮಾಡಬೇಕು. ಈಗಾಗಲೇ ಶೇಕಡಾ 18 ರಷ್ಟು ಸ್ಥಾನಗಳನ್ನು ಪರಿಶಿಷ್ಟವರ್ಗದವರಿಗಾಗಿ ಕೊಡಬೇಕೆಂದು ಹೇಳುತ್ತಾ ಬಂದಿದ್ದಾರೆ. ಇವೊತ್ತು ಸರಕಾರದ ಹುದ್ದೆಗಳಲ್ಲಿ ಯಾವ ಕೇಡರಿನಲ್ಲಿಯಾದರೂ ಈ ವರ್ಗದವರನ್ನು ನೇಮಿಸಬೇಕೆನ್ನುವ ನೀತಿಯಿತ್ತು. ಇದೂ ಆಲ್ಲದೆ ಇಂತಿಂತಹ ಕೇಡರಿಗೆ ಇಂತಿಂತಹ ಪರೀಕ್ಷೆಗಳನ್ನು ಪಾಸು ಮಾಡಿದವರನ್ನು ನೇಮಿಸಬೇಕೆನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಅದನ್ನೆಲ್ಲಾ ಈ ದಿವನ ಪರಿಪಾಲಿಸುತ್ತಾ ಬಂದಿದ್ದಾರೆಯೇ? ಹಿಂದಿನ ಮಂತ್ರಿ ಮಾಂಡಲದವರು 10-17 ದಲಿತ ವರ್ಗದವರನ್ನು ಸೋಷಿಯಲ್ ವೆಲ್‌ಫೇರ್ ಆಫೀಸರನ್ನಾಗಿ ನೇಮಕ ಮಾಡಿದ್ದರು. ಈ ಕೇಡರಿನಲ್ಲಿರುವವರು ಹಂಗಾಮಿಯಾಗಿದ್ದರು ಮತ್ತು ದಲಿತ ವರ್ಗದವರಾಗಿದ್ದರೂ ಕೂಡ ಆ ಡಿಪಾರ್ಟ್‌ಮೆಂಟಿನಲ್ಲಿ ವಾದ ವಿವಾದಗಳಾಗಿ ಇವರೆಲ್ಲರನ್ನೂ ಮನೆಗೆ ಕಳುಹಿಸಬೇಕೆಂಬ ತೀರ್ಮಾನವನ್ನು ಈ ಸರಕಾರ ಮಾಡಿತು. ಈ ಸರಕಾರ ತೀರ್ಮಾನ ಮಾಡುವಾಗ ನಮ್ಮ ರಾಜ್ಯದ ಪರಿಶಿಷ್ಟ ವರ್ಗದ ಕಲ್ಯಾಣದ ಅಭಿವೃದ್ಧಿ ಮಂಡಲಿಯ ಅಭಿಪ್ರಾಯಗಳನ್ನೂ ಪಡೆದು ಅದನ್ನು ಏತಕ್ಕೆ ಅನುಸರಿಸಿಲ್ಲ? ಇದಕ್ಕೆ ನಮ್ಮ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳೇ ಚೇರ್ಮನ್ನರಾಗಿದ್ದಾರೆ. ಇಲ್ಲಿರುವ ನಮ್ಮ ದಲಿತ ವರ್ಗದ ಜನರೆಲ್ಲರೂ ಈ ಮಂಡಲಿಯ ಸದಸ್ಯರಾಗಿದ್ದಾರೆ. ಆದರೆ ಇಂತಹ ತೀರ್ಮಾನಮಾಡುವಾಗ ಈ ಸದಸ್ಯರ ಅಭಿಪ್ರಾಯಗಳನ್ನು ಕೇಳಿ ಅದರಂತೆ ಏಕೆ ಮಾಡಲಿಲ್ಲ? ಇಡೀ ರಾಜ್ಯದಲ್ಲೇ ಈ ವರ್ಗದ ಜನರು ಗೆಜೆಟೆಡ್ ಆಫೀಸರುಗಳಾಗಿರುವವರ ಸಂಖ್ಯೆ ಬಹು ಕಡಿಮೆ ಎನ್ನುತ್ತಿರುವಾಗ ಒಂದು ಇಲಾಖೆಯಲ್ಲೇ 17 ಸಂಖ್ಯೆಯಷ್ಟು ಜನರನ್ನು ತೆಗೆದು ಹಾಕಿದ್ದಾರೆ. ಮತ್ತೆ ಈ ಬಗ್ಗೆ ಈ ವರ್ಗದ ಕಲ್ಯಾಣ ಮಾಡುವುದಕ್ಕಾಗಿ ಇರುವ ಶಾಖೆಯ ಸಚಿವರೂ ಕೂಡ ಒಂದು ಧೈರ್ಯವಾದ ಸಾಹಸವನ್ನು ತೋರದೆ ಹೋದರಲ್ಲಾ ಎನ್ನುವುದು ಬಹಳ ಶೋಚನೀಯವಾದ ವಿಚಾರ. ಹದಿನೇಳು ಜನರು ಹಂಗಾಮಿಯಾಗಿದ್ದವರು ಎಂದ ಫೈನಾನ್ಸ್ ಮಿನಿಸ್ಟರವರೂ ಹೇಳಿದರು. ಆದರೆ ಹಿಂದಿನ ಮಂತ್ರಿ ಮಂಡಲ ನೇಮಕ ಮಾಡುವಾಗ cadre and recruitment rules ಇರಲಿಲ್ಲ. ಈಚೆಗೆ ಮಾಡಿದೆ ಎಂದ ಹೇಳಿದರೆ ಇವರ ಗತಿಯೇನು? ಇದನ್ನು ಆರೋಚನೆ ಮಾಡುವುದು ಯಾರ ಜವ್ಹಾರಿ ಇಷ್ಟುವರ್ಷ ಕೆಲಸ ಮಾಡಿರುವುದರಿಂದ, ಕೆಲವರಿಗೆ Age Bar ಆಗಿದೆ, ಕೆಲವರಿಗೆ ಅವರ ಹಿಂದಿನ ಡಿಪಾರ್ಟ್‌ಮೆಂಟಿಗೆ ಹೋಗಬೇಕೆಂದರೆ ಹೇಗೆ? ಅಲ್ಲಿ ಅವರು ಆಗ ಸೆಕೆಂಡು ಡಿವಿಜನ್ನು ಕ್ಲಾರ್ಕಾಗಿಯೋ ಇಲ್ಲವೇ ಫಸ್ಟ್ ಡಿವಿಜನ್ನು ಕ್ಲಾರ್ಕಾಗಿಯೋ ಇದ್ದರು. ಆ ಕಾಲದಲ್ಲಿ ಅವರು ಬಹಳ ಪ್ರಯತ್ನಪಟ್ಟು ಗ್ರ್ಯಾಜುಯೇಟುಗಳಾಗಿ, ಡಬ್ಬಲ್ ಗ್ರ್ಯಾಜುಯೇಟುಗಳಾಗಿ ಯೋಗ್ಯತೆಯನ್ನು ಸಂಪಾದಿಸಿಕೊಂಡು ಗೆಜೆಟೆಡ್ ಹುದ್ದೆಗಳಿಗೆ ಬಂದಿದ್ದಂತಹವರು ಅವರು ಕ್ರಮವಾಗಿ ಅರ್ಜಿಗಳನ್ನು ಕೊಟ್ಟು ಬಂದಿರಲಿಲ್ಲ ಬೇರೆಯವರಿಂದಲೂ ಅರ್ಜಿಗಳನ್ನು ತೆಗೆದುಕೊಂಡು ರೂಲ್ಸು ಪ್ರಕಾರವಾಗಿ ನೇಮಕ ಮಾಡಬೇಕಾಗಿದೆ ಎಂದು ಇವರನ್ನು ತೆಗೆದುಹಾಕಿದರೆ ಹೇಗೆ? ಆಗ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನವರೆಗೆ ಇದ್ದ ಉದ್ದೇಶವೇನು, ವಯಸ್ಸಿನ ಪರಿಮಿತಿ ಇಲ್ಲದೆ ಈ ಹದಿನೇಳು ಜನರನ್ನೂ ಬೇರೆ ಬೇರೆ ಸ್ಥಳಗಳಲ್ಲಿ ನೇಮಕ ಮಾಡಿದ ಉದ್ದೇಶವೇನು ಎನ್ನುವುದನ್ನು ಈ ಸರಕಾರ ಗಮನಿಸಲಿಲ್ಲ. ಮುಖ್ಯವಾಗಿ ಕಲ್ಯಾಣಾಭಿವೃದ್ಧಿ ಶಾಖೆಯಲ್ಲಿ ಆಸಕ್ತಿಯುಳ್ಳ, ನಮ್ಮ ಸಚಿವೆಯವರೂ ಕೂಡ ಆ ಹೆಣ್ಣು ಮಕ್ಕಳ ಸಹಬಾಳ್ವೆ ಸಂಸಾರ ಏನಾದೀತು ಎನ್ನುವ ಕಡೆಗೆ ಗಮನ ಕೊಡಲಿಲ್ಲ. ಹೀಗೆ ನಮ್ಮ ಪರಿಶಿಷ್ಟ ವರ್ಗದವರ ಸ್ಥಿತಿಯಾಗಿದೆ, ಇವೊತ್ತು, ಸಂಸಾರದಲ್ಲಿ ಜಿಗುಪ್ಸೆ ಹೊಂದಿದ ಒಬ್ಬರು ಹೆಂಗಸರು ತಮ್ಮ ನಾಲ್ಕೈದು ಮಕ ಕೊಡನೆ ಬಾವಿಗೆ ಬಿದ್ದರು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ಕೇಳಿದರೆ ಆ ಸಂಸಾರಕ್ಕೆ ಎಂತಹ ದುಃಖವೊದಗಿತ್ತು ಎನ್ನುವುದು ಸ್ಪೋತ್ಪಾದಕವಾಗಿರುತ್ತದೆ. ಇಂತಹ ಘಟನೆಗಳಿಗೆ ಅವಕಾಶಕೊಡುವುದು ಸರಿಯೇ ಎಂದು ನಾನು ಸರಕಾರವನ್ನು ಕೇಳುತ್ತೇನೆ. ಇಂತಹವರನ್ನು ಕೇಳದೇ ಇರುವುದರಿಂದಲೇ ಈ ವರ್ಗದ ಜನರ ಸ್ಥಿತಿ ಹೀಗಾಗಿದೆ. ದಲಿತ ವರ್ಗದ ಜನರ ಬಗ್ಗೆ ಪ್ರಶ್ನೆ ಕೇಳಿದರೆ ನಮ್ಮ ರಾಷ್ಟ್ರದಲ್ಲಿ ದಲಿತ ವರ್ಗದವರ ಕಲ್ಯಾಣ ಮಾಡುತ್ತೇವೆ, ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುವುದು, ಶ್ರೀಮಾನ್ ದುಗ್ಗಪ್ಪನವರು ಹೇಳಿದ ಹಾಗೆ, ಕೇವಲ ಒಂದು ಆಟವಾಗಿದೆ. ಸರಕಾರ ಸರ್‌ಕ್ಯುಲರುಗಳನ್ನು ಹೊರಡಿಸಿ ಪತ್ರಿಕೆಗಳಲ್ಲಿ ಇಂತಿಂತಹ ಕೆಲಸಗಳನ್ನು ಮಾಡಿದ್ದೇವೆಂದು ಹೇಳುವುದು ಸರಕಾರದ ಆಡಳಿತದಲ್ಲಿ ಒಂದು ಬರೀ ಬಾಯಿಮಾತಿನ ಕೆಲಸವಾಗಿದೆ. ಈ ವರ್ಗದವರಿಗೆ ತಿಳಿವಳಿಕೆ ಕಡಿಮೆ ಅವರು ಮಾತನಾಡುವುದಿಲ್ಲ

ಎಂದು ತಿಳಿಯದಾರದು. ಅವರು ಅಭಿವೃದ್ಧಿ ಮತ್ತು ಅವರ ಹಕ್ಕೊಬಾಧ್ಯತೆಗಳನ್ನು ಪಡೆದು ಕೊಳ್ಳುವ ಶಕ್ತಿ ಅವರಲ್ಲಿದೆ ಎಂದು ನಾನು ನಿಮಗೆ ಇಲ್ಲಿ ಸ್ಪಷ್ಟ ಪಡಿಸುತ್ತಿದ್ದೇನೆ.

ಆದ್ದರಿಂದ ಈ ರೀತಿ ಅನ್ಯಾಯವಾಗತಕ್ಕಂಥದನ್ನು ನಿಲ್ಲಿಸಬೇಕು. ಇನ್ನಾದರೂ ಸರ್ಕಾರ ಏನೇನು ಅನ್ಯಾಯಗಳು ನಡೆಯುತ್ತಿವೆಯೋ ಅವುಗಳನ್ನು ನಿರ್ಮೂಲನ ಪಡಿಸಬೇಕು. ಯುದ್ಧ ಪರಿಸ್ಥಿತಿ ಯೆಂದು ಹೇಳಿ ಯಾವ ಇಲಾಖೆಯಲ್ಲಿ ಪೆಚ್ಚಕ್ಕೆ ಏನು ಆಡ್ಡಿಯಾಗಿದೆ, ಸಿಬ್ಬಂದಿಯಲ್ಲಿ ಏನು ಖೋತ ವಾಗಿದೆ ? ಆದರೆ ದಲಿತ ವರ್ಗದ ಕಲ್ಯಾಣಕ್ಕಾಗಿ ಪೆಚ್ಚ ಮಾಡುತ್ತಿದ್ದ ಹಣದಲ್ಲಿ ಎಷ್ಟು ಪರ್ಸಂಟೇಜ್ ಖೋತ ಆಗಿದೆ ? ತುರ್ತು ಪರಿಸ್ಥಿತಿ ನೆಪವೊಡ್ಡಿ, ಬಾಕಿ ಎಲ್ಲಾ ಇಲಾಖೆಗಳಿಗಿಂತಲೂ ಈ ಸಮಾಜ ಕಲ್ಯಾಣ ಇಲಾಖೆಗೆ ಹಣದ ಖರ್ಚನ್ನು ಹೆಚ್ಚು ಖೋತ ಮಾಡಿದ್ದಾರೆ. ಇದಕ್ಕೆ ಕಾರಣವೇನು ಅನ್ನುವುದನ್ನು ಆಲೋಚನೆ ಮಾಡಬೇಕು. ಜನರಲ್ಲಿ ಇನ್ನು ಹೃದಯ ಪರಿವರ್ತನೆಯಾಗಬೇಕು ಎಂದು ಕೇಳುತ್ತಾ ಇದ್ದೇವೆ. ಇತ್ತೀಚೆಗೆ ದೇಶದಲ್ಲಿ ನಡೆದ ಕೆಲವು ಘಟನೆಗಳಿಂದ, ಸಮಾಜ ಶೋಷಣೆಯ ಪರಿಣಾಮಗಳು ಏನೆಂದು ಮನದಟ್ಟು ಮಾಡಿಕೊಳ್ಳಬಹುದು. ನರಕಾರದವರು ಈ ಒಂದು ವರ್ಗ ವನ್ನು ಈ ರೀತಿ ಶೋಷಣೆಗೆ ಒಳಪಡಿಸುವುದು ಬಹಳ ಅನ್ಯಾಯ. ಒಂದುಕಡೆಯಲ್ಲಿ ಇವರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿದೆಯೋ, ಅಲ್ಲಿ ಮಾಡಿಕೊಳ್ಳುವುದಕ್ಕೆ ಉಪಾಯವಿಲ್ಲ. ಮೆಡಿಕಲ್ ಇಲಾಖೆಯಲ್ಲಿ 300 ವೇಕೆನ್ಸಿಗಳನ್ನು ಭರ್ತಿಮಾಡಿಲ್ಲ. ಅನೇಕ ಹುದ್ದೆಗಳು 5-6-೮ ವರ್ಷಗಳಿಂದ, ವರ್ಷಾನುಗಟ್ಟಲೆ ಖಾಲಿಯಾಗಿ ಇಡಲ್ಪಟ್ಟಿವೆ. ಇದನ್ನು ನರಕಾರ ಗಮನದಲ್ಲಿಟ್ಟುಕೊಂಡು, ನಮ್ಮ ಮಿತ್ರರಾದ ಶ್ರೀ ನರ್ವೇಶ್‌ರವರು ತಂದ ಈ ನಿರ್ಣಯವನ್ನು ಈ ನಭೆ ಒಮ್ಮತದಿಂದ ಅಂಗೀಕಾರ ಮಾಡಿ, ಸುಪ್ರೀಂ ಕೋರ್ಟು ಕೊಟ್ಟಿರುವಂಥ ತೀರ್ಮಾನವನ್ನು ಜಾರಿಗೆಕೊಟ್ಟು, ಈ ಹಿಂದುಳಿದ ಗುಂಪುಗಳಿಗೆ ರಕ್ಷಣೆ ಸಿಕ್ಕುವ ಹಾಗೆ ಏರ್ಪಾಡು ಮಾಡಲಿ. ಎಲ್ಲೆಲ್ಲಿ ಪ್ರಮೋಷನ್ನುಗಳು ಆಗಬೇಕೋ ಅಲ್ಲಿ ಈ ವರ್ಗಗಳವರಿಗೆ ಅವಕಾಶಗಳನ್ನು ಕಲ್ಪಿಸಿ ಕೊಡಲಿ ಎಂದು ನರಕಾರಕ್ಕೆ ಈ ನಭೆ ಒಂದು ಡೈರೆಕ್ಟಿವ್ ಕೊಡುವುದು ಅತ್ಯಗತ್ಯ. ಈ ನಭೆ ಈ ನಿರ್ಣಯವನ್ನು ಯಾವ ಒಂದು ಅಡ್ಡಿ ಆತಂಕವೂ ಇಲ್ಲದೆ ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಕೇಳಿ, ಈ ಎರಡು ಮಾತನ್ನು ಹೇಳಲು ಅವಕಾಶ ಕೊಟ್ಟ ಅಧ್ಯರನ್ನು ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕರ್ಮಾಲ).—ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮಿತ್ರರಾದ ನರ್ವೇಶ್‌ರವರು ತಂದಿರುವ ನಿರ್ಣಯವನ್ನು ಸ್ವಾಗತಿಸಿ ಎರಡು ಮಾತನ್ನು ಆಡಬೇಕೆಂದು ನಿಂತು ಕೊಂಡಿದ್ದೇನೆ.

ನಮ್ಮ ಹರಿಜನರಿಗೆ ನರಕಾರಿ ನೌಕರಿಗಳಲ್ಲಿ ಮತ್ತಿತರಕಡೆ 100ಕ್ಕೆ 18 ರಷ್ಟನ್ನು ಮೀಸಲಾಗಿಟ್ಟು ಕೊಡಬೇಕೆಂದು ಹೇಳುತ್ತಲೇ ಇದ್ದಾರೆ, ನರಕಾರದವರು, ಆದರೆ ಆ ಮಾತು ಎಲ್ಲಯೂ ಆಚರಣೆಯಲ್ಲಿ ನಡೆದಿಲ್ಲವೆಂದು ನರಕಾರದ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ಹರಿಜನರಿಗೆ ಸೌಕರ್ಯಗಳನ್ನು ಮಾಡಿ ಕೊಡುತ್ತೇವೆಂದು ಹೇಳುತ್ತಾರೆ ; ಆದರೆ ಅವರ ಕೆಲಸ ಏನೂ ಆಗಲಿಲ್ಲ. ಅವರಿಗೆ ಒಂದು ಸ್ಕೆಟು ಸಿಕ್ಕುವುದರಲ್ಲಿ ತ್ಯಾನು ಆಗುತ್ತಿದೆ. ಇವರ ಕಷ್ಟ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ ಗಮನಕ್ಕೆ ಬರಲಿಲ್ಲ, ಹರಿಜನರಿಗೆ ಎಷ್ಟು ತ್ಯಾಸಾಗುತ್ತಿದೆ ಯೆಂದರೆ ಹೇಳುವುದಕ್ಕೆ ಸಾಧ್ಯವಿಲ್ಲ. ನಾನು ಹೇಳುವುದನ್ನು ಹಳ್ಳಿ ಹಳ್ಳಿಯಲ್ಲಿ ಶೋಧನೆ ಮಾಡಿ ನೋಡಿದರೆ, ಅವರಿಗೆ ನಾನು ಹೇಳುವುದು ತಿಳಿವಳಿಕೆಗೆ ಬರುತ್ತದೆ.

ಹದಿನೇಳು ಜನ ಹರಿಜನರನ್ನು ವೆಲ್‌ಫೇರ್ ಆಫೀಸರಾಗಿ ಮಾಡಿದ್ದರು, ಅವರನ್ನು ನೇಮಕ ಮಾಡುವ ಕಾಲಕ್ಕೆ ಅದು ಸರಿಯಾಗಿಲ್ಲವೆಂದು ನರಕಾರದ ಗಮನಕ್ಕೆ ಬರಲಿಲ್ಲವೇ ? ಮೊದಲು ನೇಮಕ ಮಾಡಲು ನಿರ್ಣಯ ತೆಗೆದುಕೊಂಡು, ಎರಡು ವರ್ಷಗಳಾದಮೇಲೆ, ಅವರನ್ನು ಹಿಂದಿನ ಕೆಲಸಕ್ಕೆ ಕಳುಹಿಸುವುದು ಅಥವಾ ಮನೆಗೆ ಕಳುಹಿಸಿವುದು ಯಾವ ಧರ್ಮ ? ಈಗ ಅವರನ್ನು ಮನೆಗೆ ಕಳುಹಿಸು ವುದೂ ಧರ್ಮವಲ್ಲ ; ಅಥವಾ ಅವರಿಗೆ ಇನ್‌ಸ್ಪೆಕ್ಟರ್ ಅಂಥ ಸಣ್ಣ ಕೆಲಸ ಕೊಡುವುದು ಧರ್ಮವಲ್ಲ.

ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಬಹಳ ಒಳ್ಳೆಯವರಿದ್ದಾರೆ ; ಅವರು ದಯಾಳುಗಳು. ಅಂಥ ಬಲ್ಲವರ ಮುಂದೆ ನಾನು ಹೇಳತಕ್ಕಂಥಾದ್ದು ಏನಿದೆ ? ಈ ನಭೆಯ ಮುಂದೆ ಒಂದು ನಿಜವಾದ ವಿಚಾರವನ್ನು ಹೇಳುತ್ತೇನೆ. ನಮ್ಮ ಹರಿಜನರ ಏಳಿಗೆಗಾಗಿ ಮಾಡಬೇಕಾದ ಕಾರ್ಯವನ್ನೇನೂ ಮಾಡಿಲ್ಲ. ಹರಿಜನರು ಹಿಂದುಳಿದ ವರ್ಗಕ್ಕೆ ಸೇರಿದವರು, ಅವರ ಅಭಿವೃದ್ಧಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ನರಕಾರದವರು ಹೇಳುತ್ತಾರೆ. ಇದುವರೆಗೆ ಅವರ ಉನ್ನತಿಗಾಗಿ ಯಾವ ಕೆಲಸಗಳೂ ಆಗಿಲ್ಲ. ಶೇಕಡ 15ರಷ್ಟು ಕೆಲಸಗಳನ್ನು ಅವರಿಗೆ ಕೊಡಬೇಕೆಂದು ಹೇಳುತ್ತಾರೆ, ಆದರೆ ಕೊಟ್ಟಿಲ್ಲ ; ಅಷ್ಟನ್ನಾದರೂ ಅವರಿಗೆ ಕೊಡಲೆ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ನಮ್ಮ ಮಾನ್ಯ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆಂದು ಹೇಳಿ ಏನೂ ಮಾಡಲಿಲ್ಲ. ನಮ್ಮ ಡಿಸ್ಟ್ರಿಕ್ಟು ಬಹಳ ಹಿಂದುಳಿದಿದೆ, ಅಲ್ಲಿನ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಒಂದು ಜೀಪು ಕೊಡಿ ಎಂದು ಎಷ್ಟೋದಿನಗಳಿಂದ ಕೇಳು

(ಶ್ರೀಮತಿ ನಾಗಮ್ಮ)

ತ್ತಿದ್ದರೂ ಕೊಡಲಿಲ್ಲ. ನಮ್ಮನ್ನು ತೃಪ್ತಿಕರವಾಗಿ ನೋಡಿಕೊಳ್ಳುತ್ತಿಲ್ಲ. ನಮ್ಮ ಕಷ್ಟಗಳನ್ನು ಅವರಲ್ಲಿ ಎಷ್ಟು ಹೇಳಿದರೂ, ಅವರ ಗಮನಕ್ಕೆ ಬರಲಿಲ್ಲ. ಹರಿಜನರಿಗೆ ಭೂಮಿ ಕೊಡುತ್ತೇವೆಂದು ಹೇಳಿದರು, ಭೂಮಿ ಮಾಡಿಕೊಡಲಿಲ್ಲ. ಬಡ ಹರಿಜನರಿಗೆ ಮತ್ತು ರೈತರಿಗೆ ಯಾವ ಅನುಕೂಲಗಳನ್ನು ಮಾಡಿ ಕೊಡುತ್ತೇವೆಂದು ಹೇಳುತ್ತಾರೆಯೇ ಅವುಗಳನ್ನು ಬೇಗ ಮಾಡಿಕೊಟ್ಟರೆ, ಅದರಿಂದ ಒಳ್ಳೆಯದಾಗುತ್ತದೆ.

ಇಷ್ಟು ಹೇಳಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಈ ಸಭೆಯ ಮುಂದೆ ಮಾನ್ಯ ಸರ್ವೇಶ್ ಅವರು ತಂದಿರುವ ನಿರ್ಣಯವನ್ನು ನಾನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ.

ಈ ನಿರ್ಣಯ ಬರೀ ಹರಿಜನರ, ಗಿರಿಜನರ ಬಗ್ಗೆಅಲ್ಲ. ಈ ನಿರ್ಣಯ ಹಿಂದುಳಿದ ವರ್ಗಗಳವರ ಬಗ್ಗೆಯೂ ಇದೆ. ಆದ್ದರಿಂದ ಈ ಮಾನ್ಯ ಸಭೆ ಈ ವಿಷಯವನ್ನು ವಿಶೇಷ ಗಮನಕೊಟ್ಟು ವಿಚಾರ ಮಾಡಬೇಕೆಂದು ನಾನು ಬಯಸುತ್ತೇನೆ. ಏಕೆಂದರೆ ನಮ್ಮ ರಾಜ್ಯಾಂಗ ಬಂದಮೇಲೆ ಅದರ ಪ್ರಕಾರ ಸಾಧ್ಯವಾದಷ್ಟು ಮಟ್ಟಿಗೆ ಜಾತಿ ಪಂಥಗಳ ಮಾತನ್ನು ತೆಗೆದ Casteless Society ನಿರ್ಮಾಣ ಮಾಡಬೇಕು ; ಆ ಒಂದು ಸದುದ್ದೇಶದಿಂದ ಕೆಲವು ಪ್ರಕರಣಗಳು ರಾಜ್ಯಾಂಗದಲ್ಲಿ ಇವೆ.

ಈ ವಿಷಯವು ರಾಜ್ಯಾಂಗದಲ್ಲಿರುವಾಗ ಅದರ ಹಿನ್ನೆಲೆಯನ್ನು ಕೂಡವಿಚಾರ ಮಾಡಬೇಕಾದಂಥ ಪರಿಸ್ಥಿತಿ ಇದೆ. ಏಕೆಂದರೆ ರಾಜ್ಯಾಂಗ ಬರುವುದಕ್ಕೆ ಮುಂಚೆ ಸಂಸ್ಥಾನಗಳಲ್ಲಿ ಜಾತಿಗಳು, ಮತಗಳು ಇದ್ದುವು. ಕೆಲವು ವರ್ಷಗಳು, ಕಾರಣಾಂತರದಿಂದ, ಸಮಾಜದ ಕೆಲವೇ ಜನಗಳಿಗೆ ಎಲ್ಲ ಅನುಕೂಲಗಳೂ ದೊರೆತು ಮುಂದುವರಿಯುವುದಕ್ಕೆ ಅನುಕೂಲವಾದ ವಾತಾವರಣ ಕಲ್ಪನೆಯಾಗಿತ್ತು. ಆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇವತ್ತಿನ ದಿವನ ರಾಜ್ಯಾಂಗ ಬಂದಿದೆ. ಇದು ಬಂದ ತಕ್ಷಣವೇ ಸಮಾಜದಲ್ಲಿದ್ದಂಥ ಎಲ್ಲ ವರ್ಗಗಳೂ ನಾಶವಾಗುತ್ತವೆ, ಎಂದು ಭಾವನೆ ಮಾಡುವುದಾದರೆ ಅದು ಸ್ವಲ್ಪ ತಪ್ಪು ಆದೀತು. ಆದ್ದರಿಂದ ಇವತ್ತಿನ ದಿವನ ವಸ್ತುಸ್ಥಿತಿಯನ್ನು ನೋಡಬೇಕಾದ ಪರಿಸ್ಥಿತಿ ಇದೆ. ಹಿಂದುಸ್ಥಾನದಲ್ಲಿ ಮತ್ತು ನಮ್ಮ ಮೈಸೂರು ಸಂಸ್ಥಾನದಲ್ಲಿ ಬರೀ ಹರಿಜನರೆ ಹಿಂದುಳಿದಿಲ್ಲ, ಅನೇಕ ಇತರೇ ವರ್ಗದವರೂ ಹಿಂದುಳಿದಿದ್ದಾರೆ. ಕಾರಣಾಂತರದಿಂದ ಕೆಲವು ಜಾತಿಯವರು ಮುಂದುವರಿಯಲು ಸಾಧ್ಯವಾದುದಕ್ಕೆ ಆ ಕಾಲವನ್ನು ಟೀಕೆ ಮಾಡುವುದಕ್ಕೆ ಬಯಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಗೂ ಮುಂದುವರಿಯಲು ಅವಕಾಶ ದೊರೆಯಬೇಕು ಮತ್ತು ಪ್ರತಿಯೊಬ್ಬನು ಮುಂದುವರಿಯಬೇಕು ; ಆ ಪರಿಸ್ಥಿತಿಯನ್ನು ಕಲ್ಪಿಸಿದಾಗ ಮಾತ್ರ ನಮ್ಮ ಮೈಸೂರು ಸಂಸ್ಥಾನ ಮತ್ತು ಇಡೀ ಭಾರತ ಮುಂದುವರಿಯುವುದಕ್ಕೆ ಸಾಧ್ಯ. ಈ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ರಾಜ್ಯಾಂಗವನ್ನು ರಚಿಸಲಾಗಿದೆ. ಈ ಒಂದು ಮೂಲ ತತ್ವವನ್ನು ರಾಜ್ಯಾಂಗದ ಪ್ರಿಆಂಬಲ್ ಹೇಳುತ್ತದೆ.

11-30 A.M.

ರಾಜ್ಯಾಂಗದ preambleನಲ್ಲಿ "to secure to all its citizens Justice, social, economic and political, Equality of status and of opportunity" ಎಂದು ಹೇಳಿದ್ದಾರೆ. ಈ ಒಂದು ಮಹತ್ತರವಾದ ಗುರಿಯನ್ನು ಸಾಧಿಸಬೇಕಾದರೆ ವಸ್ತುಸ್ಥಿತಿಯನ್ನು ಮೀರಿ ಬಹುಮಟ್ಟಿಗೆ ಈ ಸಾಧನೆಯಲ್ಲಿ ಮುಂದೆ ಹೆಜ್ಜೆ ಇಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಅಭಿಪ್ರಾಯ. ಇವತ್ತಿನ ದಿವನ ನಾವು ಕಾನೂನಿನಲ್ಲಿ ಹೇಳಬಹುದು ಜಾತಿ, ಮತಗಳಿಲ್ಲ ಎಂದು. ಆದರೆ ಇರತಕ್ಕದ್ದನ್ನು ವಿಚಾರ ಮಾಡಬೇಕು. 1941 ಮತ್ತು 1951ರ ಜನಗಣತಿಯನ್ನು ತೆಗೆದುಕೊಂಡು ನೋಡುವುದಾದರೆ ಮೈಸೂರು ಸಂಸ್ಥಾನದಲ್ಲಿ ಕೂಡ ಹಲವಾರು ಜಾತಿಗಳಿವೆ. ಒಕ್ಕಲಿಗರಿದ್ದಾರೆ, ಲಿಂಗಾಯತರಿದ್ದಾರೆ; ಕುರುಬರಿದ್ದಾರೆ, ನಾಯಕರಿದ್ದಾರೆ, ಗೊಲ್ಲರಿದ್ದಾರೆ, ಕಬ್ಬೇರಿದ್ದಾರೆ; ಹೀಗೆ ನಾನಾ ಜಾತಿಗಳಿವೆ. ಈ ಜಾತಿಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಎಷ್ಟರ ಮಟ್ಟಿಗೆ ಮುಂದುವರಿದಿದ್ದಾನೆ ಎನ್ನತಕ್ಕ ಅಂಕಿ ಅಂಶಗಳನ್ನು ತೆಗೆದುಕೊಳ್ಳದೆ ಹೋದರೆ ರಾಜ್ಯಾಂಗದಲ್ಲಿ ಆರ್ಟಿಕಲ್ 16 (4) ರಲ್ಲಿ ಏನೊಂದು ವಿಷಯವಿದೆಯೋ ಅದರ ಪ್ರಕಾರ ಕಾನೂನು ಮಾಡಲಿಕ್ಕಾಗಲೀ, ಅದರ ಪ್ರಕಾರ ಹಿಂದುಳಿದಿರತಕ್ಕ ಜನಗಳಿಗೆ ಅವಕಾಶವನ್ನು ಕೊಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ಈ ಅಂಕಿ ಅಂಶಗಳನ್ನು ಶೇಖರಣೆ ಮಾಡದೆ ಹೋದರೆ, ಯಾವ ಪ್ರಜೆ ಯಾವ ರೀತಿಯಲ್ಲಿ ಮುಂದುವರೆದಿದ್ದಾನೆ ಎಂದು ಗಣನೆಗೆ ತೆಗೆದುಕೊಳ್ಳದೆ ಹೋದರೆ, ನಮ್ಮ ಗುರಿ

ಸಫಲವಾಗುವುದಕ್ಕೆ ಸಾಧ್ಯವಿಲ್ಲ. ನಾನು ಜಾತಿ, ಮತ ಹೆಚ್ಚಾಗಬೇಕು, ಜಾತಿ ಎನ್ನತಕ್ಕದ್ದು ಇರಬೇಕು ಎಂದು ಹೇಳುವ ಮನುಷ್ಯನಲ್ಲ. ಜಾತಿರಹಿತ ಸಮಾಜವಾಗಬೇಕು ಎನ್ನುವುದರಲ್ಲಿ ನಾನು ಮೊದಲನೆಯವನು. ಮೊದಲನಿಂದಲೂ ಪ್ರತಿಯೊಬ್ಬನಿಗೂ ಮುಂದುವರಿಯುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡದೆ ಯಾರೂ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ನಾವು ಈ ದಿನ ಕೆಲವು ಕೋಮುಗಳವರು, ಲಿಂಗಾಯತರ ಕೋಮು ಇವತ್ತಿನ ದಿವಸ ಇದೆ, ಕೋಮನ್ನು ಯಾರಾದರೂ ಬಿಟ್ಟಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ; ಹೊರಗಡೆ ಮಾತನಾಡಬಹುದು. ಬ್ರಾಹ್ಮಣರು, ಲಿಂಗಾಯತರು, ಸಾಧ್ಯವಾದಷ್ಟು ಮುಂದುವರಿದಿದ್ದಾರೆ. ನನಗೆ ಅವರ ಬಗ್ಗೆ ಏನೂ ದ್ವೇಷವಿಲ್ಲ. ಆದರೆ ಬಾಕಿಯ ಜಾತಿಗಳವರು ಎಂದರೆ ನಾಯಕರು, ಗೊಲ್ಲರು, ಕುರುಬರು ಇಂಥ ಜನಗಳನ್ನು ಹಳ್ಳಿಗಳಲ್ಲಿ ನೋಡುವುದಾದರೆ ಅವರ ಸಾಂಸ್ಕೃತಿಕ ಸ್ಥಿತಿಯಾಲ್ಲಾಗಲಿ ಆರ್ಥಿಕ ಸ್ಥಿತಿಯಲ್ಲಾಗಲಿ ಹರಿಜನರಿಗೂ ಅವರಿಗೂ ಯಾವ ವಿಧವಾದ ಭೇದವೂ ಇಲ್ಲ. ಹರಿಜನರಿಗೆ ಅನ್ಪ್ಯಶ್ಯರು ಎನ್ನತಕ್ಕ ಒಂದು ಸೋಂಕು ಇರಬಹುದೇ ವಿನಾ ಅವರ ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ನೋಡುವುದಾದರೆ ಅದರಲ್ಲಿ ಯಾವ ವಿಧವಾದ ಭೇದವೂ ಕಾಣುವುದಿಲ್ಲ. ಅಂಥ ವಸ್ತು ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ರಾಜ್ಯಾಂಗದ 16 (4)ನೆಯ ವಿಧಿಯಲ್ಲಿ ಹೇಗೆ ಹೇಳುತ್ತಾರೆ :

> "Nothing in this article shall prevent the State Government from making any provision for reservation of appointments or posts in favour of any backward class of citizens; which in the opinion of the State, is not adequately represented in the services under the State."

ಈ ಪ್ರಶ್ನೆ ಬರೀ ಹರಿಜನ ಗಿರಿಜನರ ಪ್ರಶ್ನೆಯಲ್ಲ. ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಯಾವ ಯಾವ ಜಾತಿಗಳವರು ಎಂದರೆ ಯಾವ ಯಾ[illegible] ಪ್ರಜೆ ಎಷ್ಟರಮಟ್ಟಿಗೆ ಹಿಂದುಳಿದಿದ್ದಾನೆ ಎನ್ನತಕ್ಕ ವಾಸ್ತವಾಂಶವನ್ನು ಗಣನೆಗೆ ತೆಗೆದುಕೊಂಡು ಅವನಿಗೆ ಮುಂದುವರೆಯುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವುದಕ್ಕೋಸ್ಕರವೇ ರಾಜ್ಯಾಂಗದ ಆರ್ಟಿಕಲ್ 16 (4)ರಲ್ಲಿ ಈ ಅವಕಾಶವನ್ನು ಒದಗಿಸಿದೆ. ಇದನ್ನು ನಾವು ವಿಚಾರ ಮಾಡೋಣ. ಹರಿಜನರಲ್ಲಿ (Scheduled Castes) ಅಂಕಿ ಅಂಶಗಳ ಪ್ರಕಾರ ಅಕ್ಷರಸ್ಥರ ಸಂಖ್ಯೆ ಇವತ್ತಿನ ದಿವಸ ಶೇಕಡ 4.6 ಇದೆ, Scheduled Tribesನಲ್ಲಿ ಶೇಕಡ 0.2 ಇದೆ. ಇದು ಒಂದು ಪರಿಸ್ಥಿತಿ. ಇನ್ನು ಹರಿಜನರು ಗಿರಿಜನರನ್ನು ಬಿಟ್ಟು ಬೇರೆ ಜನಾಂಗಗಳಲ್ಲಿ ನೋಡಿದರೆ, ನಾನು ಮೊದಲೇ ಹೇಳಿದಂಥ ಕೋಮುಗಳಲ್ಲಿ ಯಾವ ವಸ್ತು ಸ್ಥಿತಿ ಇದೆ ಎನ್ನತಕ್ಕ ಅಂಕಿ ಅಂಶಗಳನ್ನು ನೋಡಿದರೆ ಅವರಿಗೆ ಸಂಬಂಧಪಟ್ಟ ಅಂಕಿ ಅಂಶಗಳು ಇನ್ನೂ ತಿಳಿಯದೆ ಇವೆ. ಇಂಥ ಪರಿಸ್ಥಿತಿ ಇರುವಾಗ ಎಲ್ಲ ಪ್ರಜೆಗಳಿಗೂ ಮುಂದುವರಿಯಲು ಅವಕಾಶ ಕಲ್ಪಿಸಿ ಕೊಡುತ್ತೇವೆಂದು ಬಾಯಿಲ್ಲಿ ಹೇಳಿದ ಮಾತ್ರಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನೆಲ್ಲಾ ಶೇಖರಣೆ ಮಾಡಿ ಪ್ರತಿಯೊಬ್ಬ ಪ್ರಜೆಗೂ ಯಾವ ರೀತಿ ಮುಂದುವರಿಯುವುದಕ್ಕೆ ಅವಕಾಶಮಾಡಿಕೊಡಬೇಕು ಎನ್ನತಕ್ಕದ್ದನ್ನು ಮುಂದಿಟ್ಟುಕೊಂಡು ಅದನ್ನು ಕಾರ್ಯರೂಪಕ್ಕೆ ತಂದರೆ ಮಾತ್ರ ಎಲ್ಲ ಪ್ರಜೆಗಳೂ ಉಳಿಯಲಿಕ್ಕೆ ಸಾಧ್ಯ. ಅದನ್ನು ಬಿಟ್ಟು ಹೇಳುವುದೊಂದು ಮಾಡುವುದೊಂದು ಆದರೆ ನಮ್ಮ ಗುರಿ ಏನಿದೆ casteless and classless society ಮಾಡಬೇಕು ಎನ್ನುವುದು ಆದು ನಿಜವಾಗಿಯೂ ಸಾಧ್ಯವಾಗುವುದಿಲ್ಲ. ಇದನ್ನು ಮಾಡದೆ ಹೋದರೆ ಅದರ ದುಷ್ಪರಿಣಾಮವೇನೆಂಬುದನ್ನು ನಾವು ಗಂಭೀರವಾಗಿ ವಿಚಾರ ಮಾಡತಕ್ಕ ಪರಿಸ್ಥಿತಿ ಇದೆ. ನಾವು ಕಾನೂನಿನಲ್ಲಿ ಮಾಡಿದ್ದೇವೆಂದು ಹೇಳಿದ ಮಾತ್ರಕ್ಕೆ ಏನೂ ಪ್ರಯೋಜನವಿಲ್ಲ. ನಾವು ಒಪ್ಪಿಕೊಂಡಿರುವಂಥ ಒಂದು ತತ್ವವನ್ನು ಅಭ್ಯಾಸ ಮಾಡದೆ ಹೋದರೆ, ಅದರ ನಿವಾರಣೆಗೆ ನಿಷ್ಠೆಯಿಂದ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಹೋದರೆ, ಹಾಕಿಕೊಂಡ ಕಾರ್ಯಕ್ರಮವನ್ನು ನಿಷ್ಠೆಯಿಂದ ಆಚರಿಸದೆ ಹೋದರೆ ಅದರ ದುಷ್ಪರಿಣಾಮವೇನಾಗಬಹುದೋ ಅದಕ್ಕೆ ನಾವೆಲ್ಲರೂ ಹೊಣೆಯಾಗಬೇಕು ಎಂದು ನಾನು ಹೇಳಬಯಸುತ್ತೇನೆ.

ಮುಂದೆ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ ; ಸರ್ಕಾರದವರು ಕೆಲಸಗಳಿಗೆ ರಿಸರ್ವೇಷನ್ ಇಟ್ಟ ಮಾತ್ರಕ್ಕೆ ಅವರು ಮುಂದೆ ಬರುವುದಕ್ಕೆ ಸಾಧ್ಯವೇ ಎಂದು. ಅದು ಜನಾಂಗವನ್ನು, ಪ್ರತಿಯೊಬ್ಬ ಪ್ರಜೆಯನ್ನು, ಮುಂದುವರಿಸುವ ಕ್ರಮದಲ್ಲಿ ಒಂದು ಕ್ರಮವೆಂದು ನಾನು ಭಾವಿಸುತ್ತೇನೆ. ವಿದ್ಯಾವಂತನಾಗಬೇಕು, ವಿದ್ಯಾವಂತನಾದವನು ಸರ್ಕಾರಿ ಕ್ಷೇತ್ರದಲ್ಲಿ ಆಗಲಿ, ಖಾಸಗಿ ಕ್ಷೇತ್ರದಲ್ಲಿ ಆಗಲಿ ಪಾತ್ರ ವಹಿಸುವುದಕ್ಕೆ ಅವಕಾಶವಾಗಲೇಬೇಕು. ಈ ಒಂದು ದೃಷ್ಟಿಯಿಂದಲೇ ಸುಪ್ರೀಂ

(ಶ್ರೀ ಕೆ. ಎಚ್. ರಂಗನಾಥ್)

ಕೋರ್ಟಿನವರು ಏನೊಂದು ತೀರ್ಪು ಕೊಟ್ಟಿದ್ದಾರೆಯೋ ಅದರಲ್ಲಿ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಪ್ಯಾರಾ 24 ರಲ್ಲಿ ಅವರು ಹೀಗೆ ಹೇಳುತ್ತಾರೆ:

Supreme Court Judgment:

> *para* 24 "Therefore we are disposed to taks the view that the power of reservation which is conferred on the States under article 16 (4) of the Constitution can be exercised in appropriate cases not only by providing for reservation of appointments but also by providing for reservation of selection posts. This construction in our opinion would serve to give effect to the intention of the constitution-makers to make adequate safeguards for the advancement of the backward class and sections for which adequate representation is not afforded in the services."

ಮುಂದೆ ಪ್ಯಾರಾ 26ರಲ್ಲಿ ಅದರ ಆಗುಹೋಗುಗಳನ್ನು ಕೂಡ ವಿಚಾರ ಮಾಡಿದ್ದಾರೆ.

> "...any reservation of appointment of posts may result in the impairment of efficiency. But the risk involved in securing efficiency of administration must also be borne in mind when any State sets about making provision for the reservation of appointments or posts."

ಇಂಥ ಒಂದು ಪರಿಸ್ಥಿತಿ ಇವೆ; ದಕ್ಷತೆಗೆ ಭಂಗ ಬರತಕ್ಕ ಪರಿಸ್ಥಿತಿ ಇದೆ. ಆದರೆ ದಕ್ಷತೆಗೆ ಭಂಗ ಬರಬಾರದು ಎನ್ನತಕ್ಕ ಒಂದೇ ಉದ್ದೇಶದಿಂದ ಸಾವಿರಾರು ಜನಗಳನ್ನು ಮುಂದುವರಿಯುವುದಕ್ಕೆ ಅವಕಾಶ ಮಾಡಿ ಕೊಡದೆ ಹೋದರೆ ಅದು ಒಳ್ಳೆಯ ಕ್ರಮವಾಗಲಾರದು. ಆ ಒಂದು ದೃಷ್ಟಿಯಿಂದಲೇ ದಕ್ಷತೆಗೆ ಸ್ವಲ್ಪ ಭಂಗ ಬಂದಾಗ್ಲೂ ಎಲ್ಲ ಪ್ರಜೆಗಳಿಗೂ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಸದುದ್ದೇಶದಿಂದಲೇ ರಾಜ್ಯಾಂಗವನ್ನು ನಿರ್ಮಾಣ ಮಾಡಿದಂಥ ಜನ ರಾಜ್ಯಾಂಗವನ್ನು ರೂಪಿಸುವುದರಲ್ಲಿ ಹೆಚ್ಚು ವಿಚಾರ ಮಾಡಿ ಕೊನೆಗೆ ಆ ನಿರ್ಣಯಕ್ಕೆ ಬಂದು 16 (4)ನೆಯ ವಿಧಿಯಲ್ಲಿ ಈ ವಿಷಯವನ್ನು ಸೇರಿಸಿದ್ದಾರೆ. ಇವತ್ತಿನ ದಿವಸ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನನ್ನ ಎಲ್ಲ ಕಾರ್ಯಕ್ರಮಗಳೂ ವಿಫಲವಾಗುವುದಕ್ಕೆ ಕಾರಣ ಕೆಲವಾರು ಜನ, ಕೆಲವಾರು ಅಧಿಕಾರಿಗಳು, ಆ ಅಲ್ಪ ಸಂಖ್ಯೆಯ ಜನಕ್ಕೆ, ನನ್ನ ದೃಷ್ಟಿಯಲ್ಲಿ ಬಹಳ ಅಲ್ಪ ಸಂಖ್ಯರು, ಅವರಿಗೆ ದೇಶದ ಸಮಗ್ರ ಹಿತವ್ಯಷ್ಟಿಯಾಗಲಿ, ಎಲ್ಲ ಪ್ರಜೆಗಳ ಹಿತದೃಷ್ಟಿಯಾಗಲಿ ಅವರ ಗಮನದಲ್ಲಲ್ಲ. ಅವರ ದೃಷ್ಟಿ ಬಾವಿಯಲ್ಲಿರತಕ್ಕ ಕಪ್ಪೆಯ ದೃಷ್ಟಿಯಂತೆ ಇದೆ. ಅವರದು ಎಲ್ಲವೂ ನನ್ನ ಮನಾಪಲಯಾಗಿರಬೇಕು ಎನ್ನುವ ದೃಷ್ಟಿ ದೇಶದ ಸಮಗ್ರ ದೃಷ್ಟಿಯಿಂದ ಇದು ಯೋಗ್ಯವಾದುದಲ್ಲ. ಅವರು ಇವತ್ತಿನ ದಿವಸ ಇದನ್ನು ಬಿಡಬೇಕು. ಅದನ್ನು ಬಿಟ್ಟರೆ ಮಾತ್ರ ದೇಶದ ಕಲ್ಯಾಣವಾದೀತು, ಇಲ್ಲದಿದ್ದರೆ ಇಲ್ಲ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಇವರು ಅಧಿಕಾರಿಗಳಾಗಿದ್ದರು. ಪ್ರಜೆಗಳ ಮೇಲೆ ಅಧಿಕಾರ ಮಾಡಬೇಕೆಂಬ ಮನೋಭಾವನೆ ಅವರಿಗಿದೆ. ಸ್ವಾತಂತ್ರ್ಯ ಹೋರಾಟ ಕೆಲವು ಜನರಿಗಾಗಿ ನಡೆಯಲಲ್ಲ. ದೇಶದ ಎಲ್ಲಾ ಜನರಿಗಾಗಿ ಹೋರಾಟ ನಡೆಯಿತು. ಈ ದೃಷ್ಟಿಯಿಂದ ಬಹಳ ವಿಶಾಲ ಮನೋಭಾವನೆಯಿಂದ ಇದನ್ನು ನೋಡಬೇಕು. ಇದರಲ್ಲಿ ಸಂಕುಚಿತ ಮನೋಭಾವನೆ ಇರಕೂಡದು. ಹರಿಜನ ಗಿರಿಜನರ ಸಂಬಂಧದಲ್ಲೆ ಒಂದು ಆರ್ಡರ್ ಬಂದಿದೆ. ವಾರ್ಷಿಕ ಉತ್ಪತ್ತಿ 1,200 ರೂಪಾಯಿ ಮೇಲೆ ಇದ್ದವರು ಮುಂದುವರಿದವರು, 1,200 ರೂಪಾಯಿ ಕೆಳಗೆ ಇರತಕ್ಕವರು ಹಿಂದುಳಿದವರು ಎಂದು ಇದೆ. ಇದು ಸರಿಯಾದುದಲ್ಲ. ಇದು ಬರೀ ಹರಿಜನ ಗಿರಿಜನರ ಪ್ರಶ್ನೆಯೆಲ್ಲ. ಸಾವಿರಾರು ವರ್ಷಗಳಿಂದ ಯಾವುದೇ ವಿಧವಾದ ಅವಕಾಶ ದೊರೆಯದೆ ಈ ರೀತಿಯಾಗಿ ಈ ಜನ ಹಿಂದುಳಿದಿದ್ದಾರೆ ಎಂಬುದನ್ನು ಗಮನಿಸಬೇಕು. ಕುರುಬರು, ಬೇಡರು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಈ ಹಿಂದುಳಿದವರಲ್ಲಿ ವಿದ್ಯಾವಂತರ ಸಂಖ್ಯೆ ತೀರ ಕಡಿಮೆಯಾಗಿದೆ. ಕೆಲವರು

ಖಾಸಗೀ ಪ್ರಯತ್ನದಿಂದಲೂ ಅವಕಾಶ ದೊರಕಿಸಿಕೊಂಡು ಮುಂದೆ ಬಂದಂಥವರಿಗೆ ಪ್ರೋತ್ಸಾಹ ಕೊಡದೇ ಹೋದರೆ ಏನು ದುಷ್ಪರಿಣಾಮ ಉಂಟಾಗುತ್ತದೆ ಎಂಬುದನ್ನು ವಿಚಾರ ಮಾಡತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಈ ವಿಷಯವನ್ನು ಸಂಕುಚಿತ ದೃಷ್ಟಿಯಿಂದ ನೋಡಬಾರದು. ಶೇಕಡ 70 ಅಥವಾ 80ರಷ್ಟು ಜನ ಹಿಂದುಳಿದ ವರ್ಗಕ್ಕೆ ಸೇರಿದವರು ಸರಕಾರಿ ನೌಕರಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮುಂದುವರಿದ ಜನ ಇದ್ದಾರೆ, ಆದುದರಿಂದ ಹಿಂದುಳಿದ ವರ್ಗದವರ ಬಗ್ಗೆ ಸರಕಾರಿ ಹುದ್ದೆಯಲ್ಲಿ ಸೇರುವಾಗ್ಗೆ ಪ್ರಮೋಷನ್ ಕೊಡುವಾಗ್ಗೆ ಹೆಚ್ಚಿನ ಅದ್ಯತೆ ಕೊಡಬೇಕಾದುದು ಅಗತ್ಯ. ಎಲ್ಲ ಪರೀಕ್ಷೆ ಪಾಸಾಗಿರತಕ್ಕ ಹಿಂದುಳಿದವರಿಗೆ ಸೆಲೆಕ್ಷನ್ ಮಾಡುವಾಗ್ಗೆ ರಿಜರ್ವೇಷನ್ ಮಾಡಬೇಕು ಮತ್ತು ಅವರ ಉತ್ಸಾಹಕ್ಕೆ ಕುಂದು ಬಾರದ ಹಾಗೆ ಪ್ರೋತ್ಸಾಹ ಕೊಡಬೇಕು. ಈ ಉದ್ದೇಶದಿಂದ ಈ ನಿರ್ಣಯ ಬಂದಿದೆ. ಬರೀ ಆರ್ಥಿಕ ದೃಷ್ಟಿಯಿಂದ ಕೆಲವರು ಮುಂದುವರಿದರೆ ಅಂಥವರು ಪೂರ್ತಿಯಾಗಿ ಮುಂದುವರಿದವರು ಎಂದು ಹೇಳಲು ಶಕ್ಯವಿಲ್ಲ. ಅವರು ಸಾಂಸ್ಕೃತಿಕ ದೃಷ್ಟಿಯಿಂದಲೂ ಮುಂದುವರಿಯಬೇಕು. ಇಲ್ಲದಿದ್ದರೆ ನವ್ಮ ಮುಂದಿರುವ ದುಷ್ಪಶಕ್ತಿಯಾದ ಕಮ್ಯುನಿಜಂಗೆ ಬಲಿಯಾಗುತ್ತಾರೆಂಬುದನ್ನು ವಿಚಾರ ಮಾಡಬೇಕು. ಅವರ ಸ್ಲೋಗನ್ನಿಗೆ ಬಲಿಯಾಗುತ್ತಾರೆ. ಇವತ್ತಿನ ದಿವಸ ಕಾರ್ಮಿಕರಲ್ಲಿ ಎಷ್ಟುಜನರನ್ನು ಅಕ್ಷರಸ್ಥರನ್ನಾಗಿ ಮಾಡಿದ್ದೀರಿ? ದೇಶದ ಹಿತದೃಷ್ಟಿಯಿಂದ ನಾವೂ ಬದುಕಬೇಕು ಎಲ್ಲರೂ ಬದುಕಬೇಕು ಎಂಬ ಧ್ಯೇಯವಿರಬೇಕು. ನಾಳೆ ದೇಶಕ್ಕೆ ಏನಾದರೂ ಕೆಡಕು ಒದಗಿದರೆ ಇವರು ಯಾರೂ ಇರುವುದಿಲ್ಲ. ಕೋಟಿ ಕೋಟಿ ಸಾಮಾನ್ಯ ಜನರು ದೇಶರಕ್ಷಣೆ ಮಾಡುತ್ತಾರೆ. ಸ್ಥಾನ ಮಾನ ಹೊಂದಿದ ಜನ ದೇಶ ರಕ್ಷಣೆ ಮಾಡಲಾರರು. ಆದುದರಿಂದ ಈ ನಿರ್ಣಯದ ಬಗ್ಗೆ ಆಳವಾಗಿ ವಿಚಾರ ಮಾಡಬೇಕು. ಈ ನಿರ್ಣಯದಲ್ಲಿಯ ಉದ್ದೇಶವನ್ನು ನಿಷ್ಠೆಯಿಂದ ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ; ಕೊನೆಯದಾಗಿ, ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮಿ, ಹರಿಜನರು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದವರು ಎಂದು ತಿಳಿದುಕೊಂಡು, ಅಸ್ಪೃಶ್ಯತೆ ಇದೊಂದು ಜಾಡ್ಯ ಎಂದು ಪರಿಗಣಿಸಿ ಈದನ್ನು ಹೋಗಲಾಡಿಸಬೇಕೆಂದು ಭಾರತದ ರಾಜ್ಯಾಂಗದಲ್ಲಿ ಕೆಲವು ಅವಕಾಶಗಳನ್ನು ಕಲ್ಪಿಸಿಕೊಟ್ಟರು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದ ಕ್ಕೋಸ್ಕರ ಈ ರೀತಿ ಕೆಲವು ನಿಬಂಧನೆಗಳನ್ನು ಕೊಡಲಾಗಿದೆ. ಆದರೆ ರಾಜ್ಯಾಂಗದಲ್ಲಿ ಒದಗಿಸಿರುವ ಅವಕಾಶವನ್ನು 15 ವರ್ಷವಾದರೂ ಜಾರಿಗೆ ತರುವಲ್ಲಿ ನಾವು ವಿಫಲವಾಗಿದ್ದೇವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಮೈಸೂರು ರಾಜ್ಯದಲ್ಲಿ 17-11-1961ರಲ್ಲಿ ಒಂದು ಪುಸ್ತಕವನ್ನು ಪ್ರಕಟಮಾಡಿದ್ದಾರೆ. ಹರಿಜನರು ಗಿರಿಜನರು ಇತರೇ ಜನರು ಎಷ್ಟೆಷ್ಟು ರಾಜ್ಯದ ಆಡಳಿತದಲ್ಲಿ ಸ್ಥಾನಮಾನ ಹೊಂದಿದ್ದಾರೆ ಎಂಬುದನ್ನು ಇದರಲ್ಲಿ ವಿವರವಾಗಿ ಕೊಟ್ಟಿದ್ದಾರೆ. ಇದರ ಪ್ರಕಾರ ಕ್ಲಾಸ್ 1 ರಲ್ಲಿ 1.81, ಷೆಡ್ಯೂಲ್ ಕ್ಯಾಸ್ಟಿನವರಿಗೆ 0.24, ಷೆಡ್ಯೂಲ್ ಟ್ರೈಬ್ಸ್‌ನವರು ಮತ್ತು ಬಾಕಿಯವರು ಶೇಕಡ 97.87 ಭಾಗ ಹೊಂದಿರುವುದನ್ನು ಹೇಳಿದೆ. ಅದರ ವಿವರ ಈ ರೀತಿ ಇದೆ :—

ಕ್ಲಾಸ್	ಷೆಡ್ಯೂಲ್ ಕ್ಯಾಸ್ಟ್ಸ್	ಷೆಡ್ಯೂಲ್ಡ್ ಟ್ರೈಬ್ಸ್	ಇತರರು
1	1.81	0.24	97.87
2	3.36	1.24	96.90
3	3.84	.03	96.13
4	11.96	1.10	86.94
ಎಲ್ಲಾ ತರಗತಿಯಿಂದ ಭಾಗ ಹೊಂದಿರುವ ವಿವರ	7.7	0.63	91.66

ಈ ವಿವರ ಮೈಸೂರು ಸರಕಾರ ಪ್ರಕಟಪಡಿಸಿರುವ Welfare Scheduled Castes and Schedued Tribles in the State of Mysore ಎಂಬ ಪುಸ್ತಕದಲ್ಲಿದೆ.

ಇದನ್ನು ನೋಡಿದರೆ ಈ 15 ವರ್ಷದಲ್ಲಿ ಹಿಂದುಳಿದವರ ಬಗ್ಗೆ ಸರ್ಕಾರ ಎಷ್ಟು ಮಮತೆ ತೋರಿಸಿದೆ ಎಂಬ ವಿಚಾರ ವ್ಯಕ್ತವಾಗುತ್ತದೆ. ಈ 15 ವರ್ಷಗಳಲ್ಲಿ ಹರಿಜನರು ಮತ್ತು ಗಿರಿಜನರಿಗಾಗಿ ಸರ್ಕಾರದವರು ಎಷ್ಟೋ ಹಣವನ್ನು ವೆಚ್ಚ ಮಾಡಿದ್ದಾರೆ. ಆದರೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗಿಲ್ಲ. ಅದೂ ಅಲ್ಲದೆ ರಾಜ್ಯಾಂಗದಲ್ಲಿ ಕಲ್ಪಿಸಿಕೊಟ್ಟಿರತಕ್ಕ ಅವಕಾಶಗಳನ್ನು ಜಾರಿಗೆ ತರುವುದರಲ್ಲೂ ಸರ್ಕಾರ ಹಿಂದುಳಿದಿದೆ. ರಾಜ್ಯಾಂಗದ ಆರ್ಟಿಕಲ್ 16 (4)ರ ಪ್ರಕಾರ ಹರಿಜನರಿಗೆ ಅಪಾಯಿಂಟ್‌ಮೆಂಟ್‌ನಲ್ಲಿ ಸರಿಯಾದ ಅವಕಾಶ ಒದಗಿಸಿಕೊಡಬೇಕೆಂದು ವರದಿ

(ಶ್ರೀ ಬಿ. ಎಚ್. ಲಕ್ಷ್ಮಣಯ್ಯ)

ಯಾಗಿದೆ; ಆದರೆ ಇದುವರೆಗೂ ರಾಜ್ಯ ಸರ್ಕಾರ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಒದಗಿಸಿ ಕೊಡುವುದರಲ್ಲಿ ವಿಫಲವಾಗಿದೆ.

ನಮ್ಮ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಹರಿಜನಾಭಿವೃದ್ಧಿ ಕಾರ್ಯಗಳನ್ನು ತೆಗೆದು ಕೊಂಡಿದೆ. ಸಮಾಜ ಕಲ್ಯಾಣ ಇಲಾಖೆಯವರು ಅಥವಾ ಸರ್ಕಾರದವರು ಪ್ರತಿವರ್ಷ ಹರಿಜನರು ಮತ್ತು ಗಿರಿಜನರಿಗೆ ಎಷ್ಟು ಪ್ರಾತಿನಿಧ್ಯ ಸರ್ಕಾರದಲ್ಲಿ ಸಿಕ್ಕಿದೆ, ಯಾವ ಯಾವ ಇಲಾಖೆಯಲ್ಲಿ ಎಷ್ಟು ಪರ್ಸೆಂಟೇಜ್ ಸಿಕ್ಕಿದೆ ಎಂಬುದನ್ನು ಇದುವರೆಗೂ ತನಿಖೆ ಮಾಡಿಲ್ಲ. ಇದನ್ನು ನೋಡಿದರೆ ಎಷ್ಟು ಉದಾಸೀನ ಎನ್ನುವುದು ವ್ಯಕ್ತವಾಗುತ್ತದೆ. ಪ್ರತಿ ವರ್ಷ ತನಿಖೆ ನಡೆಸಿದ್ದಪಕ್ಷದಲ್ಲಿ ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹರಿಜನ ಮತ್ತು ಗಿರಿಜನರನ್ನು ಎಷ್ಟೋ ಜನರನ್ನು ಭರ್ತಿಮಾಡಬಹುದಾಗಿತ್ತು. ಯಾವುದಾದರೂ ಇಲಾಖೆಯಲ್ಲಿ ಹರಿಜನ ಗಿರಿಜನರ ಅರ್ಜಿ ಇದ್ದರೆ ಅದನ್ನು ಸಾಮಾನ್ಯವಾಗಿ ಹಿಂದಕ್ಕೆ ಹಾಕುವುದಕ್ಕೆ ನೋಡುತ್ತಾರೆ. ಪ್ರಮೋಷನ್‌ನಲ್ಲಿ ಏನಾದರೂ ಹರಿಜನರ ಒಬ್ಬ ಮನುಷ್ಯ ಪ್ರಮೋಷನ್ ಲಿಸ್ಟ್‌ನಲ್ಲಿದ್ದರೆ ಅವನಿಗೆ ಪ್ರಮೋಷನ್ ಕೊಡುವುದಕ್ಕೆ ಡಿಲೇ ಮಾಡಿ ಅದನ್ನು ತಡೆಗಟ್ಟುತ್ತಾ ಇದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದರು, 17 ಆಫೀಸರುಗಳನ್ನು ಜೆಂಪೊರೆರಿಯಾಗಿ ಅಪಾಯಿಂಟ್ ಮಾಡಿತ್ತು, ಅವರ ಸರ್ವೀಸ್ಸು ರೆಗ್ಯೂಲರೈಸ್ ಆಗದೇ ಇದ್ದುದರಿಂದ ರೆಟ್ರೆಂಚ್ ಮಾಡಿದ್ದೇವೆ ಎಂದು.

ಶ್ರೀ ಬಿ. ಡಿ. ಜತ್ತಿ.—ರಿಟ್ರೆಂಚ್‌ಮೆಂಟ್ ಪ್ರಶ್ನೆ ಬಂದಿಲ್ಲ, ಆ ವಿಷಯವನ್ನು ನಾನು ಮಾತನಾಡಲಿಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರೀ ಹರಿಜನ ಗಿರಿಜನ ಆಫೀಸರುಗಳಿದ್ದಾರೆ—ಈ 17 ಜನರೂ ಹರಿಜನ ಗಿರಿಜನರಿಗೆ ಸೇರಿದವರೆಂದೂ ಅವರೇ ಸೆಂಟ್ ಪರ್ಸೆಂಟ್ ಇದ್ದಾರೆ ಎಂಬ ದೃಷ್ಟಿಯಿಂದ ಇವತ್ತು ಸರ್ಕಾರ ಈ ಕಾರ್ಯಕ್ರಮ ತೆಗೆದುಕೊಂಡಿದೆ. ಸರ್ಕಾರದವರಿಗೆ ಒಂದು ಪ್ರಶ್ನೆ ಹಾಕಲು ಇಷ್ಟಪಡುತ್ತೇನೆ, ಸ್ಕ್ಯಾವೆಂಜರ್ಸ್ ಹರಿಜನ ಗಿರಿಜನರಿಗೆ ಸೇರಿದವರು ಕ್ಲಾಸ್ 4 ಲಿಸ್ಟ್‌ನಲ್ಲಿ ಅವರು ಬರುತ್ತಾರೆ, ಅವರನ್ನು 18 ಪರ್ಸೆಂಟ್ ಮಾತ್ರ ನೇಮಕ ಮಾಡಿಕೊಳ್ಳಿರಿ ಅನಂತರ ಆ ಸ್ಥಾನಗಳಿಗೆ ಮುಂದುವರಿದವರನ್ನು ನೇಮಕಮಾಡಿಕೊಳ್ಳಿ. ಆ ರೀತಿ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. 1960ರಲ್ಲಿ ಸರ್ಕಾರ ಪ್ರಕಟಿಸಿದ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಪುಸ್ತಕದಲ್ಲಿ ನಾಲ್ಕನೇ ದರ್ಜೆ ನೌಕರರು ಶೇಕಡ 11.96 ಇದ್ದಾರೆ ಎಂದಿದೆ. ಇಷ್ಟು ಹೆಚ್ಚಾಗುವುದಕ್ಕೆ ಕಾರಣ ಸ್ಕ್ಯಾವೆಂಜರ್ಸ್ ಎಲ್ಲಾ ಟೌನ್ ಮತ್ತು ಲೋಕಲ್ ಬಾಡೀಸ್‌ನಲ್ಲಿ ಇರುವುದರಿಂದ 11 96 ಇವೆ. ಸ್ಕ್ಯಾವಂಜರ್ಸ್‌ನ್ನು ಬಿಟ್ಟು ಈಗ ನೀವು ಇತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿರುವಂತೆ ಅವರನ್ನು ಶೇಕಡ 18 ನೇಮಕ ಮಾಡಿಕೊಂಡರೆ ಬಹುಶಃ ಅದು 3 ಅಥವಾ 4 ಪರ್ಸೆಂಟ್‌ಗೆ ಬರಬಹುದು ಎಂದು ಅಭಿಪ್ರಾಯ ಪಡುತ್ತೇನೆ

Sri A. P. APPANNA (Virajpet).—I want to know whether those employees were taken into consideration when that list was finalised with regard to class IV ?

ಶ್ರೀ ಬಿ. ಎಲ್. ಲಕ್ಷ್ಮಣಯ್ಯ.—ಹೌದು. ಈ ಸರ್ಕಾರ ಭಾರತದ ಶ್ರೇಷ್ಠ ನ್ಯಾಯಾಲಯ ತೀರ್ಮಾನ ಮಾಡಿದಂತೆ ಹರಿಜನರಿಗೆ ಪ್ರೊಮೋಷನ್ ಕೊಡಬೇಕು ಹುದ್ದೆಗಳು ಭರ್ತಿ ಆಗಬೇಕಾದಲ್ಲಿ ರಿಸರ್ವೇಷನ್ ಇದ್ದವರಿಗೆ ಮೊದಲು ಪ್ರಿಫರೆನ್ಸ್ ಕೊಟ್ಟು ಅವುಗಳನ್ನು ಭರ್ತಿ ಮಾಡಬೇಕೆಂಬ ಆ ತೀರ್ಮಾನವನ್ನು ಒಂದು ವರ್ಷದ ಮೇಲಾದರೂ ಜಾರಿಗೆ ಕೊಡದೇ ಈ ಸಭೆಯಲ್ಲಿ ಬರೀ ಒಂದು ಹೇಳಿಕೆ ಕೊಟ್ಟಿದ್ದಾರೆಯೇ ವಿನಾ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡ ಹಾಗೆ ಕಾಣಲಿಲ್ಲ. ನಾವೂ ಈ ಸಭೆಯ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂಬುವುಗಳು ಎಷ್ಟೋ ಸಾರಿ ಈ ವಿಷಯದಲ್ಲಿ ಒತ್ತಾಯಮಾಡಿದ್ದೇವೆ. ಆದರೂ ಸರ್ಕಾರದವರು ಇದುವರೆಗೂ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಈ ಜನಾಂಗದವರು ಮುಂದುವರಿಯುವುದರ ಬಗ್ಗೆ ಸರ್ಕಾರದವರು ಎಷ್ಟೊಂದು ಉದಾಸೀನ ಮನೋಭಾವವಿಟ್ಟಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ದೇಶದ ಒಟ್ಟು ಜನಾಂಗದಲ್ಲಿ ಈ ಜನಾಂಗವೂ ಒಂದು ಭಾಗ ಎಂಬುದನ್ನು ಸರ್ಕಾರದವರು ಪರಿಗಣಿಸಬೇಕು. ಸಮಾಜದಲ್ಲಿ ಎಷ್ಟೋ ಜಾತೀಯತೆ ಕಡಮೆಯಾಗಿದೆ ಸಮಾನ ಅವಕಾಶ ದೊರಕಿಸಿಕೊಳ್ಳಲು ಅನೇಕ ರೀತಿಯ ವ್ಯವಸ್ಥೆಗಳನ್ನು ಮಾಡುತ್ತಿರುವಾಗಲೂ ಸರ್ಕಾರ

ದವರು ಈ ಜನಾಂಗದವರ ಬಗ್ಗೆ ತೋರಿಸುತ್ತಾ ಇರತಕ್ಕ ಅನಡ್ಡೆ ಬಹಳ ವಿಷಾದಕರ. ಹೀಗಾಗ ಬಾರದು, ಈ ಜನಗಳಿಗೆ ಸರಿಯಾದ ಪ್ರಾತಿನಿಧ್ಯ ಸರ್ಕಾರಿ ಕ್ಷೇತ್ರದಲ್ಲಿ ಕೊಡಬೇಕು ಎಂದು ಹೇಳಿ ಸರ್ಕಾರದವರನ್ನು ಪ್ರಾರ್ಥನೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷ ರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಮಾನ್ಯ ಅಧ್ಯಕ್ಷರ ಮೂಲಕ ಈ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ಮಿತ್ರರಾದ ಶ್ರೀಮಾ ನರ್ವೇಶ್ ಅವರು ಈ ಹಿಂದುಳಿದ ಜನಾಂಗದ ವಿಚಾರದಲ್ಲಿ ತಂದಿರುವ ಈ ನಿರ್ಣಯವನ್ನು ಸಮರ್ಥಿಸುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಸೇರಿದವರಲ್ಲಿ ಲಂಬಾಣಿ, ಭೋವಿ, ಕೊರಮ, ಕೊರಚ ಈ ಜನಾಂಗದವರು ಇದ್ದಾರೆ. ಅವರಿಗೆ ಸರ್ಕಾರದವರು ಕೆಲಸಗಳನ್ನು ಕೊಡುವ ವಿಚಾರದಲ್ಲಿಯಾಗಲ, ಅವರಿಗೆ ಏರ್ಪಾಡು ಮಾಡಬೇಕಾದ ಹಾಸ್ಟೆಲುಗಳ ವಿಚಾರದಲ್ಲಿಯಾಗಲಿ ಕಾಲೋನಿಗಳನ್ನು ನಿರ್ಮಿಸುವ ವಿಚಾರದಲ್ಲಿಯಾಗಲಿ ಸರಿಯಾದ ಅನುಕೂಲಗಳು ದೊರಕುತ್ತಾ ಇಲ್ಲ. ಮಾನ್ಯ ಮಂತ್ರಿ ಗಳು ಬೇಕಾದರೆ ಈ ವಿವರಗಳನ್ನು ತರಿಸಿ ನೋಡಿದರೂ ಪರವಾಗಿಲ್ಲ, ನೋಡಬಹುದು. ಆದ್ದ ರಿಂದ ದಯವಿಟ್ಟು ಈ ಹಿಂದುಳಿದ ಜನಾಂಗದವರ ವಿಚಾರದಲ್ಲಿ ನಮ್ಮ ಸರ್ಕಾರದವರು ವಿಶಾಲವಾದ ಹೃದಯದಿಂದ ಇವರ ಜನಸಂಖ್ಯೆಗನುಗುಣವಾಗಿ ಸರಿಯಾದ ಒಂದು ಪ್ರಾತಿ ನಿಧ್ಯವನ್ನು ಕೊಡಬೇಕೆಂದು ನಾನು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ.

ಇದೇ ಸಭೆಯಲ್ಲ ಮೊನ್ನೆತಾನೆ ಈ ಡೆಪ್ಯುಟಿ ಬಿ. ಡಿ. ಓ. ಗಳ ವಿಚಾರ ಚರ್ಚೆಗೆ ಬಂದಿದ್ದಾಗ ಯಾವ ಯಾವ ಜನಾಂಗದವರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಡಲಾಗಿದೆ ಎಂಬ ವಿಚಾರ ಚರ್ಚೆಗೆ ಬಂದಿತ್ತು. ಈ ಜನಾಂಗಕ್ಕೆ ಒಂದು ಸೀಟ್ ಸಹ ಸಿಕ್ಕಿಲ್ಲ. ಹೀಗೆಲ್ಲ ಅನ್ಯಾಯ ಮಾಡಬಾರದೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಜನಾಂಗಕ್ಕೆ ಯಾವಯಾವ ಬಾಬಿನಲ್ಲಿ ಎಷ್ಟೆಷ್ಟು ಅನು ಕೂಲ ಮಾಡಬೇಕೋ ಅಷ್ಟನ್ನೂ ಯಾವ ಕೋಮುವಾರು ಭಾವನೆಯೂ ಇಲ್ಲದಂತೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12 NOON

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸೊಳ್ಯ).—ಮಾನ್ಯ ಸಭಾಧ್ಯಕ್ಷರೆ, ಶ್ರೀ ಜೆ. ಪಿ. ನರ್ವೇಶ್ ಅವರು ಸಭೆಯ ಮುಂದಿಟ್ಟಿರತಕ್ಕ ನಿರ್ಣಯವನ್ನು ಸ್ವಾಗತಿಸುತ್ತೇನೆ ಮತ್ತು ಅದನ್ನು ಸಮರ್ಥಿ ಸುತ್ತ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಅವರು ತಮ್ಮ ನಿರ್ಣಯದಲ್ಲಿ—ಹಿಂದುಳಿದ ವರ್ಗಗಳು ಮತ್ತು ಅನುಸೂಚಿತ ಜಾತಿಗಳನ್ನು ಸರ್ಕಾರಿ ಹುದ್ದೆಗಳಿಗೆ ಭರ್ತಿಮಾಡುವಾಗ ಅವರಿಗೆ ಮೀಸಲಾಗಿಟ್ಟಿರುವ ಸ್ಥಾನಗಳನ್ನು ಆಯಾಯ ಜನಾಂಗದವರಿಗೇ ಹಂಚಿಕೆಮಾಡಲು ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನೀಗ ಹೇಳಬೇಕಾಗಿರತಕ್ಕ ಒಂದು ಮಾತೇನೆಂದರೆ: ಈ ಸಭೆಯಲ್ಲಿ ಇಲ್ಲಯವರೆಗೂ ಮಾತನಾಡಿದವರು ಯಾರೂ ಷೆಡ್ಯೂರ್–ಟ್ರೈಬನ್ನು ಬಿಟ್ಟು ಮಾತನಾಡಿರುವುದಿಲ್ಲ. ಸರ್ಕಾರಿ ಹುಕುಂಗಳಲ್ಲೂ ಅದನ್ನು ಕೈಬಿಟ್ಟಿಲ್ಲ. ಅಂದರೆ ಎಲ್ಲೆ ಷೆಡ್ಯೂರ್ಡ್ ಕ್ಯಾಸ್ಟಿನ ವಿಚಾರ ಹೇಳಿರುತ್ತಾರೋ ಅಲ್ಲಿ ಷೆಡ್ಯೂರ್ಡ್ ಟ್ರೈಬಿನ ವಿಚಾರವೂ ಸಹ ಇದ್ದೇ ಇರುತ್ತದೆ. ಕೆಲವು ಆಜ್ಞೆಗಳಲ್ಲಿ ಇದು ಕೈಬಿಟ್ಟು ಹೋಗಿದ್ದರೂ ಅಲ್ಲಿ ಇದು ಅಧ್ಯಾಹಾರ ರೂಪದಲ್ಲಿ ದ್ದೇ ಇರುತ್ತದೆ. ಆದರೆ ಈ ವಿಚಾರ ಎಷ್ಟೋ ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ನನಗೆ ಗೊತ್ತಿರುವ ಹಾಗೆ ಅಧಿಕಾರಿಗಳಿಗೆ ಈ ವಿಚಾರ ಗೊತ್ತಿಲ್ಲದೆ ಈ ಆಜ್ಞೆಯಲ್ಲಿ ಷೆಡ್ಯೂರ್ಡ್ ಟ್ರೈಬಿನವರ ವಿಚಾರ ಹೇಳಿಲ್ಲ ಎಂದು ಅವರನ್ನು ಕೈಬಿಟ್ಟಿರು ತ್ತಾರೆ. ಸರಿಯಾಗಿ ಅರ್ಥಮಾಡಿಕೊಳ್ಳದೆ ಕೆಲವು ಅಧಿಕಾರಿಗಳು ಆಜ್ಞೆಯನ್ನು ಉಲ್ಲಂಘನೆ ಮಾಡಿ ರುತ್ತಾರೆ. ಹೀಗೆ ಎಷ್ಟೋ ಸಂದರ್ಭಗಳಲ್ಲಿ ಷೆಡ್ಯೂರ್ಡ್ ಟ್ರೈಬಿನವರಿಗೆ ಅನ್ಯಾಯವಾಗಿದೆ. ಆದರೆ ಇಲ್ಲಯತನಕ ಮಾತನಾಡಿರತಕ್ಕವರಾದರೋ ಆ ಷೆಡ್ಯೂರ್ಡ್ ಕ್ಯಾಸ್ಟ ಒಂದರ ವಿಚಾರವನ್ನೇ ಹೆಚ್ಚಿಗೆ ಮಾತನಾಡಿದ್ದಾರೆ. ಆದರೆ ಇಲ್ಲಿಯವರೆಗೂ ಈ ಷೆಡ್ಯೂರ್ಡ್ ಟ್ರೈಬಿನವರ ವಿಚಾರ ಅಷ್ಟಾಗಿ ಪ್ರಚಾರ ವಾಗಿಲ್ಲ. ಈ ವಿಚಾರವನ್ನು ನಾನು ಬಾರಿಬಾರಿಗೂ ಹೇಳುತ್ತಲೇ ಬಂದಿದ್ದೇನೆ. ಇಡೀ ರಾಜ್ಯದಲ್ಲಿ ಷೆಡ್ಯೂರ್ಡ್ ಟ್ರೈಬಿನ ಪರವಾಗಿರತಕ್ಕ ಪ್ರತಿನಿಧಿ ನಾನೊಬ್ಬನೇ.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಚಂದ್ರಶೇಕರಪುರ).—ಈಗ ಷೆಡ್ಯೂರ್ಡ್ ಕ್ಯಾಸ್ಟಿನ ಪರವಾಗಿ ಏನೇನು ಹೇಳಿದ್ದಾರೋ ಅದೆಲ್ಲವೂ ಷೆಡ್ಯೂರ್ಡ್ ಟ್ರೈಬಿನವರಿಗೂ ಅಪ್ಲೋಮೆಟಿಕ್ಕಾಗಿ ಅನ್ವಯಿಸು ತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ನಾನು ಬಟ್ಟು ಹೇಳಿದ್ದಾರೆಂದು ಹೇಳುವುದಿಲ್ಲ ಷೆಡ್ಯೂಲ್ಡ್ ಟ್ರೈಬ್ಸಿನವರ ವಿಚಾರ ಇವರೊಂದಿಗೆ ಅಧ್ಯಾಹಾರವಾಗಿದೆ, ಆದರೂ ಎಷ್ಟೋ ಜನರಿಗೆ ಹಾಗೂ ಕೆಲವು ಅಧಿಕಾರಿಗಳಿಗೆ ಈ ವಿಚಾರ ಗೊತ್ತಿಲ್ಲವೆಂಬ ಅಂಶವನ್ನು ನಾನು ಹೇಳುತ್ತಿದ್ದೆನು. ಆದರೆ ಈ ವಿಚಾರ ಇಲ್ಲಿ ಸಹ ಕೆಲವು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿರುವುದು ಬಹಳ ಆಶ್ಚರ್ಯ. ಹೀಗೆ ಇಲ್ಲಿಂತಕ್ಕ ಕೆಲವು ಸದಸ್ಯರಿಗೇ ಈ ವಿಚಾರ ಗೊತ್ತಿಲ್ಲವೆಂದು ಕಾಣುತ್ತಿರುವಾಗ ಇನ್ನು ಕೆಲವು ಅಧಿಕಾರಿಗಳಿಗೆ ಗೊತ್ತಿಲ್ಲವೆನ್ನುವುದರಲ್ಲಿ ಆಶ್ಚರ್ಯವೇನಿದೆ? 1962ರಲ್ಲಿ ಕೇಂದ್ರ ಸರ್ಕಾರದವರು ಥೇಬಾರ್ ಸಮಿತಿ ಎಂಬುದಾಗಿ ಒಂದು ಟ್ರೈಬಲ್ ಸಮಿತಿಯನ್ನು ಏರ್ಪಡಿಸಿದರು. ಈ ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಥೇಬರ್ ಕಮಿಟಿಯವರು :

> "There is a broad consensus of opinion that whilst the rest of the population of the country goes forward and India and the world changes so rapidly, the tutral area can remain in isolation."

ಎಂದು ಹೇಳಿದ್ದಾರೆ. ಆ ಕಮಿಟಿಯವರು ಮೈಸೂರು ದೇಶದಲ್ಲಿ ಸಂಚಾರಣೆ ಮಾಡಲು ಬಂದಿದ್ದ ಸಮಯದಲ್ಲಿ ನಾನು ಅವರೊಂದಿಗೆ ಮೂರು ದಿನ ಅವರ ಜೀಪಿನಲ್ಲೇ ತಿರುಗಾಡಿದೆನು. ಅದರೆ ಆ ಕಮಿಟಿಯವರನ್ನು ನಾನು ಒಂದು ದಿವಸ ಮಾತ್ರ ಬಿಟ್ಟಿರಬೇಕಾಯಿತು. ಅದಕ್ಕೆ ಕಾರಣವೇನೆಂದರೆ: ರಾಜ್ಯದ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಶ್ರೀ ದಾಸಪ್ಪನವರ ಜೀಪು ರಾತ್ರಿ ಕೊಡಗಿಗೆ ಹೋಗುವಾಗ ದಾರಿಯಲ್ಲಿ ಒಂದು ಅಪಘಾತಕ್ಕೀಡಾಗಿತ್ತು. ಬೇರೆ ಯಾರೂ ಅಲ್ಲಿರಲಿಲ್ಲ. ಅದನ್ನು ಜತೆಯಲ್ಲಿದ್ದ ನಾನೆ ಕಾಯಬೇಕಾಗಿ ಬಂದಿತ್ತು. ಆದುದರಿಂದ ಆ ದಿವಸ ಮತ್ತು ಮಾರನೆಯ ದಿವಸ ನಾನು ಮೀಟಿಂಗಿಗೆ ಹೋಗಲಕ್ಕಾಗಲಿಲ್ಲ. ಆದುದರಿಂದ ಆ ದಿವಸದ ಮೀಟಿಂಗಿನಲ್ಲಿ ಷೆಡ್ಯೂಲ್ಡ್ ಟ್ರೈಬಿನವರ ವಿಚಾರಕ್ಕೆ ನನಗೆ ಅಷ್ಟು ಹೆಚ್ಚಿನ ಗಮನ ಕೊಡಲಾಗಲಿಲ್ಲ. ಆ ದಿವಸ ಮೈಸೂರಿನಲ್ಲಿ ಕೊನೆಗೆ ನಡೆದ ಮೀಟಿಂಗಿಗೆ ಷೆಡ್ಯೂಲ್ಡ್ ಕ್ಯಾಸ್ಟಿನ ಪ್ರತಿನಿಧಿಗಳು ಸಾಕಷ್ಟು ಬಂದಿದ್ದರು, ಆದರೆ ಷೆಡ್ಯೂಲ್ಡ್ ಟ್ರೈಬಿನವರು ಮಾತ್ರ ಬಂದಿರಲಿಲ್ಲ. ಅದರಲ್ಲಿ ನಾನಫಿಯಲ್ ಮುಖಂಡರುಗಳಿರಲಿಲ್ಲ. ಇಲ್ಲಿಗೆ ಸುಮಾರು 40 ವರ್ಷಗಳಿಂದ ಷೆಡ್ಯೂಲ್ಡ್ ಕ್ಯಾಸ್ಟಿನವರನ್ನು ಅಭಿವೃದ್ಧಿಗೆ ತರಲು ಸರಕಾರದವರು ಪ್ರಯತ್ನಮಾಡುತ್ತಿದ್ದಾರೆ. ಆದರೆ ಏನೂ ಸಾಧ್ಯವಾಗಿಲ್ಲ. 1957ರಲ್ಲಿ ನಮ್ಮ ರಾಜ್ಯದಲ್ಲಿ ಟ್ರೈಬಲ್ ಸ್ಕೀಂ ಜಾರಿಗೆ ಬಂದಿತು. ಆದರೆ ಅದು ಸಾಕಷ್ಟು ಪ್ರಚಾರಕ್ಕೇ ಬರಲಿಲ್ಲ. ಈ ವಿಚಾರದಲ್ಲಿ ಪತ್ರಿಕೆಗಳವರೂ ಸಾಕಷ್ಟು ಪ್ರಕಟಣೆ ಮಾಡಲಿಲ್ಲ. ಈ ಹಿಂದೆ ಒಂದಾವರ್ತಿ ಈ ಟ್ರೈಬಲ್ ಪಂಗಡದ ಜನರಲ್ಲಿ ಹೆಚ್ಚಿನವರು ಇನ್ನು ಜನರ ಮಧ್ಯೆ ಬಂದಿಲ್ಲ. ಒಮ್ಮೆ ಒಂದು ಮಾಂಟಿಂಗಿನಲ್ಲಿ ಟ್ರೈಬ್ ಜನರೊಬ್ಬರು ನಡುಗಿ ನೆಲಕ್ಕೆ ಬಿದ್ದುಹೋದರು ಆತನಿಗೆ ಸಭೆಗೆ ಬಂದು ಅಭ್ಯಾಸವಿರಲಿಲ್ಲ ಎಂಬುದಾಗಿ ಅನಂತರ ನಮಗೆ ಗೊತ್ತಾಯಿತು. ಈ ಹಿಂದೆ ಶ್ರೀ ಎನ್. ರಾಚಯ್ಯನವರು ಕೆಲವು ಗುಡ್ಡಗಾಡಿನ ಜನರನ್ನು ಒಂದು ಮಾಟಿಂಗಿಗೆ ಕರೆದುಕೊಂಡು ಬಂದಿದ್ದರು. ಆಗಲೂ ಆ ಜನರು ನಮ್ಮ ಮುಂದೆ ಮಾತನಾಡಲು ಬಾಯಿಬರದೆ, ಹೆದರಿ ನೆಲಕ್ಕೆ ಕುಸಿದು ಬಿದ್ದುಹೋದರು. ಇವರಿಗೆ ಜನರ ಮುಂದೆ ಮಾತನಾಡುವ ಧೈರ್ಯವೂ ಇಲ್ಲ, ಹೀಗೆ ಇವರು ಬಾಯಿಲ್ಲದ ಜನರು. ಇವರಿಗೆ ಯಾವತ್ತು ಜನ ಸಂಪರ್ಕವೇ ಇಲ್ಲ. ಗುಡ್ಡಗಳಲ್ಲಿ ಸ್ಪೇಡ್ಕೆಯಾಗಿ ಹಣ್ಣು ಹಂಪಲು, ಗೆಡ್ಡೆಗೆಣಸುಗಳನ್ನು ತಿಂದು ಕೊಂಡು ತಿರುಗಾಡುತ್ತಿದ್ದಂಥ ಜನ ಇವರು. ಆದುದರಿಂದ ಇನ್ನಾದರೂ ಈ ಜನರಿಗೆ ಸರ್ಕಾರದವರು ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಟ್ರೈಬಲ್ ಜನರು ಬಹಳ ಕಷ್ಟಕ್ಕೆ ಸಿಕ್ಕಿದ ಜನರು. ಇವರ ಕಷ್ಟಗಳನ್ನು ತಪ್ಪಿಸಲಕ್ಕೆ ಏನು ಮಾಡಬೇಕು ಎನ್ನುವುದನ್ನು ಥೇಬರ್ ರಿಪೋರ್ಟಿನಲ್ಲಿ ಹೇಳಿದ್ದಾರೆ. ಅಲ್ಲಿ ಒಂದು ಮಾತನ್ನು ಹೇಳಿದ್ದಾರೆ:

> "There have been large scale transfers of tribal land consequent upon the undesirable activites of meney-lenders, forest contractors and other exploiters."

ಇದು ವಾಸ್ತವವಾದ ಸಂಗತಿ. ಇವರ ಹಕ್ಕು ಬಾಧ್ಯತೆಗಳನ್ನು ಮತ್ತು ಇವರಿಗೆ ಬೇಕಾದ ಸೌಕರ್ಯಗಳನ್ನು ಕೊಡಲು ಅಗುಹೋಗುಗಳನ್ನು ತಿಳಿಯಲು ಅನುಕೂಲವಾಗುವಂತೆ ಸರಕಾರ ಇವರ ಕಡೆಗೆ ಹೆಚ್ಚಿನ ನಿಗಾ ವಹಿಸಬೇಕು.

ನಾನಾಗಲೇ ಹೇಳಿದ ಹಾಗೆ ನಿಮ್ಮ ವರ್ಗದವರಿಗಾಗಿ ಶೇಕಡಾ 18 ರಷ್ಟು ಸ್ಥಾನಗಳನ್ನೂ ಒಂದು ರೀತಿಯಾಗಿ 15+3 ಎಂದು ಇರುವಂತೆ ಮಾಡಿದರೆ ಷೆಡ್ಯೂಲ್ಡ್ ಟ್ರೈಬ್ ಜನರಿಗೂ ಸಿಕ್ಕಲು ಅನುಕೂಲವಾಗುತ್ತದೆ. ಇತ್ತೀಚೆಗೆ ಕೆಲವು ವರ್ಷಗಳಿಂದ ನಮ್ಮ ಭಾಗದಲ್ಲಿ S. S. L. C. ಪಾಸು ಆದ ಟ್ರೈಬ್‌ನ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಕೆಲವು ಸಲ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಶೇಕಡಾ 3 ಸ್ಥಾನಗಳೂ ಸಿಕ್ಕುವುದಿಲ್ಲ.

ಈಗಾಗಲೇ ನಮ್ಮ ಈ ಪರಿಶಿಷ್ಟ ಹಿಂದುಳಿದ ವರ್ಗಗಳವರಿಗೆ ನೌಕರಿಗಳನ್ನು ಕೊಡುವ ವಿಷಯದಲ್ಲಿ ಅನೇಕರು ಹೇಳಿದ್ದಾರೆ. ಅವರು ಹೇಳುವಾಗ I, II, III ಮತ್ತು IV ನೇ ವರ್ಗಗಳಲ್ಲಿನ ವ್ಯತ್ಯಾಸಗಳನ್ನೂ ಹೇಳಿದರು ಅದರಂತೆ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಸಂಬಂಧವಾದ ಅಂಕಿ ಅಂಶಗಳು ಹೀಗಿವೆ. II ನೇ ಕ್ಲಾಸಿನಲ್ಲಿ 24, III ನೇ ಕ್ಲಾಸಿನಲ್ಲಿ 43, IV ನೇ ಕ್ಲಾಸಿನಲ್ಲಿ 1.1 ಷೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬಿನವರ ಶೇಕಡಾವಾರು ಬಹು ಕಡಮೆಯಾಗಿದೆ ಎನ್ನುವುದು ಇದರಿಂದ ತಿಳಿಯುತ್ತದೆ. ಈ ಜನಾಂಗಕ್ಕೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಲು ಸರಕಾರ ತುಂಬಾ ಆಸಕ್ತ ವಹಿಸಬೇಕು. ಈಚೆಗೆ ಬಿ. ಡಿ. ಓ. ಗಳು ಮತ್ತು ಡೆಪ್ಯುಟೀ ಬಿ. ಡಿ. ಓ. ಗಳನ್ನು ನೇಮಕ ಮಾಡಿದಾಗ ಟ್ರೈಬಿನವರು ತಮ್ಮ ಸ್ಥಾನಗಳನ್ನು ಹೈಕೋರ್ಟಿಗೆ ರಿಟ್ ಹಾಕಿ ಪಡೆಯಬೇಕಾಯಿತು. ಅಲ್ಲದೆ ಈ ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದಿದ್ದರೂ ಅವರ ಬಗ್ಗೆ ಆಡಳಿತದಲ್ಲಿ ಮಲತಾಯಿ ಧೋರಣೆ ಇರುವುದು ಕಂಡು ಬರುತ್ತಿದೆ ಎಂದು ಮತ್ತೊಮ್ಮೆ ಹೇಳಬೇಕಾಗಿದೆ. ಹೀಗಾಗಬಾರದು. ಎಲ್ಲ ಸರಕಾರಿ ನೌಕರರುಗಳ ಸರಾಸರಿ ನೋಡುವಾಗ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಪ್ರಾತಿನಿಧ್ಯ 7.71 ಆದರೆ ಷೆಡ್ಯೂಲ್ ಟ್ರೈಬ್ಸ್‌ನವರಿಗೆ 0.63 ಇದೆ. ಇದರಿಂದಾಗಿ ನಮ್ಮ ಷೆಡ್ಯೂಲ್ಡ್ ಟ್ರೈಬ್ಸ್‌ನವರನ್ನು ಕೇಳುವವರೇ ಯಾರೂ ಇಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲ ಸಾಲಿಯನ್ನರು ಹದಿನೇಳು ಮಂದಿ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರು ಆಫೀಸರುಗಳನ್ನು ಹೊರಗೆ ಹಾಕಿದ್ದಾರೆಂದು ಹೇಳಿದರು. ಆ ರೀತಿ ಹೊರಗೆ ಹಾಕುವುದು ತುಂಬಾ ವ್ಯಸನಕರವಾದುದು. ಈ ರೀತಿ ಮಾಡುವುದೂ ಅನ್ಯಾಯ. ಅವರನ್ನು ಹೀಗೆ ಉದ್ಯೋಗ ಹೀನರಾಗಿ ಮಾಡಬಾರದು. ಉದ್ಯೋಗ ಕೊಟ್ಟ ಮೇಲೆ ಅವರ ಹುದ್ದೆಯನ್ನು ಕಿತ್ತುಕೊಳ್ಳುವುದು ತಪ್ಪು. ಆ ರೀತಿ ಹುದ್ದೆ ರಹಿತವಾಗಿರಲಾರರು ಎಂದು ನಾನು ತಿಳಿಯುತ್ತೇನೆ. ಇದರ ಬಗ್ಗೆ ನನಗೇನೂ ತಿಳಿಯದ್ದರಿಂದ ನಾನೇನೂ ಹೆಚ್ಚಿಗೆ ಹೇಳಬಯಸುವುದಿಲ್ಲ. ನಾನು ಈ ಹಿಂದೆ ಒಂದು ಕವಿತೆಯನ್ನು ಮಾಡಿದ್ದೆ. ಅದು ಒಂದು ಕಥೆಯ ಹಾಗೆ ಇತ್ತು ಅದೇನೆಂದರೆ ಒಂದು ಕೆರೆಯ ಏರಿಯ ಮೇಲೆ ಒಂದು ನೊಣವನ್ನು ಹೊಂಚುಹಾಕುತ್ತ ಒಂದು ಕಪ್ಪೆ ಕುಳಿತಿತ್ತು. ಆ ಕಪ್ಪೆಯನ್ನು ಒಂದು ಹಾವು ಬಂದು ತಿಂದಿತು. ಆ ಹಾವನ್ನು ಒಂದು ಗಿಡುಗ ಬಂದು ತಿಂದಿತು. ಆ ಗಿಡಗವನ್ನು ಒಬ್ಬ ಬೇಟೆಗಾರ ಬಂದು ಕೊಂದನು ಎಂಬಂತೆ ನಮ್ಮ ಜನಾಂಗಕ್ಕೆ ಕೊಡುವ ಅನುಕೂಲಗಳು ಹಾಗಾಗಬಾರದು. ನಮ್ಮ ಜನಾಂಗಕ್ಕೆ ಇಂತಿಂತಹ ಸೌಲಭ್ಯಗಳನ್ನು ಒದಗಿಸಬೇಕೆಂದು ಕಾನ್ಸ್‌ಟಿಟ್ಯೂಷನ್ನಿನಲ್ಲಿ ಹೇಳಿದ್ದರೂ ಅವನ್ನು ಒದಗಿಸದೆ ಕೇವಲ ಸ್ವಾರ್ಥದಿಂದಲೇ ನೋಡಿಕೊಂಡು ಹೋದರೆ ವಿಪತ್ತುಂಟಾಗುತ್ತದೆ ಎಂದು ನಾನು ಹೇಳುತ್ತೇನೆ. ಈಗಾಗಲೇ ಒಬ್ಬರು ಹೇಳಿದಂತೆ ಒಬ್ಬರು ಕ್ಲಾರ್ಕ್ ಆಗಿದ್ದವರನ್ನು ತಕ್ಕ ಯೋಗ್ಯತೆ ಇಲ್ಲದ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಅಧಿಕಾರಿಗಳಾಗಿ ಮಾಡಿದ್ದವರನ್ನು ಈಗ ಕೆಲಸದಿಂದ ತೆಗೆಯುವುದಾದರೆ ಅದು ಸರಕಾರದ ತಪ್ಪಾಗಬಹುದು. ಹಾಗೆ ಮಾಡಬೇಕಾದರೆ ಏನೋ ಕೆಲವು ಕಾರಣಗಳಿರಬಹುದು, ನಾವುಗಳೆಲ್ಲರೂ ಇಲ್ಲಿ ಆಗಿಂದಾಗ್ಗೆ ಅಧಿಕಾರಿಗಳಲ್ಲಿ ದಕ್ಷತೆಯಿರಬೇಕು ಇಲ್ಲದಿದ್ದರೆ ಸರಕಾರದ ಕೆಲಸಗಳು ಹಾಳಾಗಿ ಹೋಗುತ್ತವೆ. ಎಂದು ಹೇಳುತ್ತಿದ್ದೇವೆ. ಆಫೀಸರಲ್ಲಿ ತಕ್ಕ ದಕ್ಷತೆಯಿಲ್ಲದಿರಬಹುದು, ಅಂತಹವರನ್ನು ಮೇಲಿನ ಹುದ್ದೆಗಳಿಗೆ ನೇಮಿಸಿದರೆ ನಮಗೇ ಹಾನಿಯಾಗುತ್ತದೆ. ಇದನ್ನು ಸಮರ್ಥನೆ ಮಾಡಿ ಹೇಳುವುದರಲ್ಲಿ ತಪ್ಪೇನಿಲ್ಲ. ಇದು ನಿರ್ವಿವಾದವಾದ ನಿರ್ಧಾರ. ಅಲ್ಲದೇ ಕೇವಲ ಒಂದು ಡಿಪಾರ್ಟ್‌ಮೆಂಟಿನಲ್ಲಿ ಒಂದೇ ವರ್ಗದವರನ್ನೇ ನೇಮಿಸುವುದು ಸಮಾಧಾನಕರವಲ್ಲ. ನಾನು ಹೀಗೆ ಹೇಳುತ್ತೇನೆಂದು ಯಾರೂ ತಪ್ಪು ತಿಳಿಯಬಾರದು, ಒಂದು ಸಾರಿ ಹಿಂದೆ ಶ್ರೀ ಪದ್ಮನಾಭ ಎನ್ನುವವರು ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಆಫೀಸರಾಗಿದ್ದರು.

ಉಪಾಧ್ಯಕ್ಷರು.—ಹೆಸರುಗಳನ್ನು ಹೇಳಬೇಡಿ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಡೈರೆಕ್ಟರರು ಮೂರು ತಿಂಗಳಲ್ಲಿ ಹರಿಜನರ ಮತ್ತು ಗಿರಿಜನರ ಸ್ಥಿತಿಗತಿಗಳನ್ನೆಲ್ಲಾ ತಿಳಿದು ಬಹು ಸುಲಭವಾಗಿ ಸರಳವಾಗಿ ವರದಿಯೊಂದನ್ನು ಕೊಟ್ಟಿದ್ದರು. ಅದರಂತೆ ಈಗಲೂ ಮಾಡಿದ್ದಾರೆಂದು ತಿಳಿದಿದ್ದೆ. ಹಾಗಿಲ್ಲದೆ ಈಗ ಕೇವಲ ಒಂದೇ ಜಾತಿಯವರು ಒಂದೇ ಕಡೆಯಲ್ಲಿದ್ದರೆ ತೊಂದರೆಯಾಗುತ್ತದೆ. ಇದಕ್ಕೆ ಬದಲಾಗಿ ವಿಶ್ರ ಜಾತಿಯವರಿದ್ದಾರೆ ಅನಾನುಕೂಲಗಳಾಗುವುದು ಕಡಮೆ, ನಮ್ಮ ಷೆಡ್ಯೂಲ್ಡ್ ಟ್ರೈಬ್ಸ್‌ನವರು ವಿದ್ಯಾಭ್ಯಾಸ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ದಲ್ಲಿ ಹಿಂದುಳಿದವರು; ಎಲ್ಲರೂ ಅಕ್ಷರಸ್ಥರಾಗಿಲ್ಲ ಎಂದು ಒಬ್ಬರು ಹೇಳಿದರು. ಅದನ್ನು ನಾನೂ ಒಪ್ಪುತ್ತೇನೆ. ಇದಕ್ಕಾಗಿ, ನಮ್ಮಲ್ಲಿ ಅಕ್ಷರಸ್ಥರೇ ಕಡಮೆಯಿರುವಾಗ ಸರಕಾರಿ ಉದ್ಯೋಗವನ್ನು ಕೊಡುವಾಗ S.S.L.C. ಆಗಿರಬೇಕೆಂದು ನಿರ್ಬಂಧ ಮಾಡಲಾಗಿದೆ. ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಉದ್ಯೋಗ ಕೊಡುವಾಗ S.S.L.C. ಯಲ್ಲಿ Fail ಆಗಿದ್ದರೂ ಒಂದು Subject ನಲ್ಲಿ 5 ಅಥವಾ 10 ಮ್ಯಾರ್ಕ್ಸ್ ರಿಯಾಯ್ತಿ ಕೊಟ್ಟು ನೇಮಿಸಬೇಕು.

ಈಗ ಇನ್ನೊಂದು ವಿಚಾರವನ್ನು ಹೇಳುವುದಾದರೆ ಶ್ರೀಮತಿ ಚಂಪಾಬಾಯಿ ಭೋಗೆಯವರು ಬೇರೆ ಬೇರೆ ಸಮಿತಿಗಳನ್ನು ಮಾಡಿದ್ದರೆಂದು ಹೇಳಿದರು. ಅದರಲ್ಲಿ ಒಂದು ವಿಚಾರವನ್ನು ಹೇಳಬಹುದು. ಷೆಡ್ಯೂಲ್ಡ್ ಟ್ರೈಬಿಗೆ ಒಂದು ಕಮಿಟಿ ಬೇರೆ ಮಾಡಿದ್ದಾರೆ. ಇಡಲ್ಲಿ ಸಹ ಷೆಡ್ಯೂಲ್ಡ್ ಟ್ರೈಬ್ಸಿನವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ ಅದು ಸಿಕ್ಕಬೇಕೆಂದು ಕೆಲವು ವರ್ಷಗಳಿಂದ ಎನಂತಿ ಮಾಡಿಕೊಂಡರೂ, ಅದನ್ನು ಗಣನೆಗೆ ತೆಗೆದುಕೊಳ್ಳದಿರುವುದು ವಿಷಾದಕರ. ಸಾಕಷ್ಟು ಪ್ರಾತಿನಿಧ್ಯ ಕೊಡಲು ಆ ಜನಾಂಗದವರು ಇಲ್ಲವೆಂದು ಅವರು ಹೇಳಿದರೂ ಆ ಜನತೆ ಇಲ್ಲ ಎಂದು ಹೇಳುವುದು ಸರಿಯಲ್ಲ. ಅವರು ಗುಡ್ಡ ಪ್ರದೇಶದಲ್ಲಿ ಅಡ್ಡಾಡಿ ಓಡಾಡುವ ಜನ ಅವರು ಎರಡು ಲಕ್ಷ ಜನರಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ಈಗ ಒಬ್ಬರು ಮಾನ್ಯ ಸದಸ್ಯರ ಧ್ವನಿಯಿಂದ ಅರ್ಥವಾಗುತ್ತಿದೆ. ಅದೇನೆಂದರೆ ಎರಡು ಜನಾಂಗಕ್ಕೂ ಒಂದೇ ಸಮಿತಿ ಇರಬೇಕಾಗಿತ್ತೆಂದು. ಈಗ ಎರಡು ಕಮಿಟಿಗಳು ಆಗಿಹೋಗಿವೆ. ನಾವೆ ಪರಾಂಬರಿಸಿ, 2 ಬೇಕೋ, 3 ಬೇಕೋ, ಏನು ಮಾಡಬೇಕಾದರೂ ಮಾಡೋಣ. ಒಂದೇ ಇರಬೇಕಾಗಿತ್ತು ಎಂದು ನಾವು ಹೇಳಬೇಕಾಗಿಲ್ಲ. ಟ್ರೈಬಿನವರ ಜೀವನ, ಅವರ ವಿದ್ಯಾಭ್ಯಾಸ, ಅವರ ಪ್ರಗತಿ, ಸುಧಾರಣೆ ತೀರ ಭಿನ್ನ ಭಿನ್ನವಾದುವು ಎಂದು ತಿಳಿಯುತ್ತದೆ. ಏಕೆಂದರೆ ಹರಿಜನರು ಇರುವುದು ಹಳ್ಳಿಯಲ್ಲಿ. ಆದರೆ ಗುಡ್ಡಗಾಡು ಜನರು ಗುಡ್ಡ ಬೆಟ್ಟ ಪ್ರದೇಶದಲ್ಲಿ ಇರುತ್ತಾರೆ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಕೊಡಗು, ದಕ್ಷಿಣ ಕನ್ನಡ ಮತ್ತು ಬೆಳಗಾಂವ. ಈ ಮೂರು ಜಿಲ್ಲೆಗಳಲ್ಲಿ ಹೆಚ್ಚಾಗಿದ್ದಾರೆ. ಸೆನ್ಸಸ್ ಲೆಕ್ಕಕ್ಕಿಂತ ಅವರ ಜನಸಂಖ್ಯೆ ಜಾಸ್ತಿ ಇದೆ, ಏಕೆಂದರೆ ಅವರು ಗಣನೆಗೆ ಸಿಕ್ಕಿದವರು. ಬಳಿ ಅಂಗಿಯ ಜನರನ್ನು ನೋಡಿದರೆ ಓಡಿಹೋಗುತ್ತಾರೆ. ಅವರು ಬೇರೆ ಜನರೊಂದಿಗೆ ಬೆರತು ಇರುವುದಕ್ಕೆ ಇಚ್ಛೆಪಡುವುದಿಲ್ಲ. ನಾವಾಗಿಯೇ ಅವರಲ್ಲಿಗೆ ಹೋಗಿ ಅವರ ಅಭಿವೃದ್ಧಿಯ ಬಗ್ಗೆ ಸರ್ಕಾರದ ಧೋರಣೆ ಏನುಂಟು ಎಂದು ಹೇಳಬೇಕು. ಎಲ್ಲರ ಉದ್ಧಾರ ನಮ್ಮ ಆಕಾಂಕ್ಷೆಯಾಗಿರುವುದರಿಂದ ಅದು ನೆರವೇರಬೇಕಾದರೆ ನಾವು ಷೆಡ್ಯೂಲ್ಡ್ ಟ್ರೈಬ್ಸ್‌ನ ಗುಡ್ಡ ಗಾಡು ಜನಗಳ ಬಗ್ಗೆ ಹರಿಜನರ ಉದ್ಧಾರಕ್ಕೆ ಈಗ ಎಷ್ಟು ಗಮನ ಕೊಡುತ್ತಿದ್ದೇವೆಯೋ ಅದಕ್ಕಿಂತ ಹೆಚ್ಚು ಗಮನಕೊಡಬೇಕು, ಹೆಚ್ಚು ಮುತುವರ್ಜಿ ವಹಿಸಿಬೇಕು. ಇವತ್ತಿನ ದಿವಸ ತಂದಿರುವ ನಿರ್ಣಯದಂತೆ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೆ ನೇಮಕ ಮಾಡುವಾಗಲಿ, ಬಡತಿ ಕೊಡುವಾಗಾಗಲೀ ಶೇಕಡ 15 ಮತ್ತು ಶೇಕಡ 3ರ ರೇಶ್ಯೋವನ್ನು ಅನುಸರಿಸಬೇಕು. ಈ ದಾಮಾಷವನ್ನು ಕೇವಲ ನೇಮಕ ಮಾಡುವಾಗ ಮಾತ್ರವಲ್ಲ, ಭಡ್ತಿ ಮಾಡುವಾಗಲೂ ಅನುಸರಿಸಬೇಕೆಂದು ಒತ್ತಿಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† **Sri L. B. BIRJE** (Khanapur) Spoke in Marati.

Mr. SEPUTY SPEAKER.—The time allotted for this resolution is extentded by half-an-hour.

The House may take up this subject next time.

The House now rises and will re-assemble at 12-30 P.M. on Wednesday the 18th September 1963.

The House adjourned at Thirty Minutes past Twelve of the Clock to meet again at Thirty minutes past Twelve of the Clock on Wednesday the 18th September 1963.

WD 1171—GPB—900—23-11-63